ಕೃಷಿ ವಿಶ್ವವಿದ್ಯಾಲಯ ರಾಯಚೂರು
ಐಸಿಎಆರ್ –ಕೃಷಿ ವಿಜ್ಞಾನ ಕೇಂದ್ರ
ಆಳಂದ ರಸ್ತೆ, ಕಲಬುರಗಿ–585101

e-mail: kvkglb.in@gmail.com Phone: 08472-274596

ಸಂ/ಹಿವಿಮು/ಕೆವಿಕೆ/ಕ/138/2019–20. ದಿನಾಂಕ: 20–07–2019

ಗೆ,

ಅಧ್ಯಕ್ಷರು
ಕರ್ನಾಟಕ ಕೃಷಿ ಬೆಲೆ ಆಯೋಗ
ಬೆಂಗಳೂರು.

ಮಾನ್ಯರೆ,

ವಿಷಯ: ಕರ್ನಾಟಕ ಸರ್ಕಾರದ ಕೃಷಿ ಬೆಲೆ ಆಯೋಗ ಪ್ರಾಯೋಜಿತ "ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ ಯೋಜನೆಯ" 2017–18 ರಿಂದ ಜುಲೈ 2019 ರ ವರೆಗಿನ ಪ್ರಗತಿ ವರದಿ ಕಳುಹಿಸುತ್ತಿರುವ ಬಗ್ಗೆ.

<>*<>*<>

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರದ ಕೃಷಿ ಬೆಲೆ ಆಯೊಗ ಪ್ರಾಯೋಜಿತ "ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ ಯೋಜನೆಯ" 2017–18 ರಿಂದ ಜುಲೈ 2019 ರ ವರೆಗಿನ ಪ್ರಗತಿ ವರದಿಯನ್ನು ತಮ್ಮ ಅವಗಾಹನೆಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು
ಕೃಷಿ ವಿಜ್ಞಾನ ಕೇಂದ್ರ, ಕಲಬುರಗಿ
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
ಕೃಷಿ ವಿಜ್ಞಾನ ಕೇಂದ್ರ ಕಲಬುರಗಿ–585 101

ಆದರ [illegible] ಮಾನ್ಯ ವಿಸ್ತರಣಾ ನಿರ್ದೇಶಕರು, ಕೃ.ವಿ.ವಿ. ರಾಯಚೂರು ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗುತ್ತಿದೆ.

Kan, Ltr -2019-20 KVK, Klb. D, folder

**ಕರ್ನಾಟಕ ಕೃಷಿ ಬೆಲೆ ಆಯೋಗ, ಬೆಂಗಳೂರು,**

**ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು**

**ಮತ್ತು**

**ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ**

**ಸಹಭಾಗಿತ್ವದಲ್ಲಿ**

**ಕರ್ನಾಟಕ ಸರ್ಕಾರದ ಕೃಷಿ ಬೆಲೆ ಆಯೋಗ ಪ್ರಾಯೋಜಿತ**

**"ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ ಯೋಜನೆ"ಯ**

# ಪ್ರಗತಿ ವರದಿ (2017–18 ರಿಂದ 2019–20)

**ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ,**

**ಆಳಂದ ರಸ್ತೆ, ಕಲಬುರಗಿ – 585 101**

# ಯೋಜನೆಯ ತಂಡ :

## "ರೈತರ ಆದಾಯ ಮತ್ತು ಕಲ್ಯಾಣ ಅಭಿವೃದ್ಧಿ ಯೋಜನೆ"

- **ಪ್ರಧಾನ ಅನ್ವೇಶಕರು** - ಡಾ. ರಾಜು ಜಿ. ತೆಗ್ಗೆಳ್ಳಿ, ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
- **ಸಹಪ್ರಧಾನ ಅನ್ವೇಶಕರು -** 1.ಡಾ. ಮಂಜುನಾಥ ಪಾಟೀಲ್ – ವಿಜ್ಞಾನಿ (ಪ್ರಾಣಿಶಾಸ್ತ್ರ)

  2. ಡಾ. ಚನ್ನವೀರ್, ಮುಖ್ಯಸ್ಥರು, ಸಮಾಜ ವಿಜ್ಞಾನ ವಿಭಾಗ, ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ, ಕಲಬುರಗಿ

  3. ಕುಮಾರಿ. ಕೆ. ಆನಂದಮ್ಮ ಡಿಪ್ಲೋಮಾ (ಕೃಷಿ) ಕ್ಷೇತ್ರ ಸಹಾಯಕರು ಕೆವಿಕೆ ಕಲಬುರಗಿ



ದಿನಾಂಕ: 21–07–2017 ರಂದು **ಕೃಷಿ ಬೆಲೆ ಆಯೋಗದ ಅಧ್ಯಕ್ಷರಾದ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ** ರವರು ತೆಲ್ಲೂರು ಗ್ರಾಮಕ್ಕೆ ಭೇಟಿ ನೀಡಿ, ಹಳ್ಳಿಯ ಎಲ್ಲಾ ಮಾಹಿತಿ ಮತ್ತು ಸಮಸ್ಯೆಗಳ ವಿಚಾರ ಕುರಿತು **"ರೈತರ ಸಂವಾದ"** ಕಾರ್ಯಕ್ರಮ ನಡೆಸಲಾಯಿತು.

**ಪೀಠಿಕೆ:**

ರೈತರ ಆದಾಯವು ಇಂದಿನ ವರ್ತಮಾನದಲ್ಲಿ ಕೇವಲ ಕ್ಷೇತ್ರ ಬೆಳೆಗಳಿಂದ ಮಾತ್ರ ನಿರ್ಧರಿತವಾಗದೇ ಅನೇಕ ಮೂಲಗಳಿಂದ ಬರುವ ಆದಾಯದಿಂದ ನಿರ್ಧರಿತವಾಗುತ್ತದೆ. ಅವುಗಳೆಂದರೆ ಪಶು ಸಂಗೋಪನೆ, ರೇಷ್ಮೆ, ಮೀನುಗಾರಿಕೆ, ತೋಟಗಾರಿಕೆ, ರೈತ ಕುಟುಂಬದ ಸದಸ್ಯರು ಹೊರ ಊರುಗಳಲ್ಲಿ ಕೆಲಸ ಮಾಡಿ ಕಳುಹಿಸುವ ಹಣ ಇತ್ಯಾದಿಗಳು ಸಹ ಆದಾಯದಲ್ಲಿ ಸೇರುತ್ತವೆ. ಏಕಬೆಳೆ ಕೃಷಿಯ ಬದಲು ಈಗಿನ ಆಧುನಿಕ ತಂತ್ರಜ್ಞಾನವು ಸಮಗ್ರ ಕೃಷಿ ಪದ್ಧತಿಯನ್ನು ಉತ್ತೇಜಿಸುತ್ತದೆ. ಕೃಷಿ–ತೋಟಗಾರಿಕೆ, ಕೃಷಿ–ಹೈನುಗಾರಿಕೆ, ಕೃಷಿ–ರೇಷ್ಮೆ ಇತ್ಯಾದಿಗಳನ್ನು ಒಳಗೊಂಡಿರುತ್ತದೆ ಹಾಗು ಬೆಳೆಗಳು ಕೈಕೊಟ್ಟಾಗ ಬೇರೆ ಮೂಲಗಳಿಂದ ಆದಾಯವು ಒಂದು ರೈತರು ತೀರಾ ಕಂಗೆಡುವ ಪರಿಸ್ಥಿತಿಯಿಂದ ಅವರನ್ನು ಪಾರು ಮಾಡುತ್ತದೆ.

ಈ ನಿಟ್ಟಿನಲ್ಲಿ **ಕರ್ನಾಟಕ ಸರ್ಕಾರದ ಕೃಷಿ ಬೆಲೆ ಆಯೋಗವು ರೈತರ ಆದಾಯ** ಹೆಚ್ಚಿಸುವುದಲ್ಲದೆ ರೈತರ ಅಭಿವೃದ್ಧಿ ಪಡಿಸುವ ಬಗ್ಗೆ ಕಾರ್ಯಯೋಜನೆಯನ್ನು ಕೃಷಿ ವಿಜ್ಞಾನ ಕೇಂದ್ರಗಳ ಮೂಲಕ ಅನುಷ್ಠಾನಗೊಳಿಸಲಾಗಿದೆ.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಅಡಿಯಲ್ಲಿ ಬರುವ ಕೃಷಿ ವಿಜ್ಞಾನ ಕೇಂದ್ರ ಕಲಬುರಗಿ ಮತ್ತು ಕೇಂದ್ರಿಯ ವಿಶ್ವವಿದ್ಯಾನಿಲಯ ಕಲಬುರಗಿ ಜೊತೆಗೂಡಿ **ಆಳಂದ** ತಾಲೂಕಿನ **ತೆಲ್ಲೂರ** ಗ್ರಾಮದಲ್ಲಿ ಈ ಯೋಜನೆಯನ್ನುಈ ಕೆಳಗಿನ ದ್ಯೇಯೋಧ್ಯೇಶಗಳೊಂದಿಗೆ ಅನುಷ್ಠಾನಗೊಳಿಸಲಾಗಿದೆ.

**ಯೋಜನೆಯ ದ್ಯೇಯೋಧ್ಯೇಶಗಳು :**

ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರು (ಪ್ರಧಾನ ಅಧ್ಯಯನಕಾರರು) ತೆಲ್ಲೂರ ಗ್ರಾಮವನ್ನು ಆಯ್ಕೆ ಮಾಡಿ, ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿನ ಅಭಿವೃದ್ಧಿ ಇಲಾಖೆಗಳು, ರೈತರು, ತಜ್ಞರ ಸಭೆಯಲ್ಲಿ ಒಪ್ಪಿಗೆ ಪಡೆದು, ನಂತರ ಆಯ್ಕೆ ಮಾಡಿದ ಗ್ರಾಮದಲ್ಲಿ ರೈತರನ್ನು ಸಮಾವೇಶಗೊಳಿಸಿ ಅವರ ಸಹಮತವನ್ನೂ ಸಹ ಪಡೆದಿದ್ದಾರೆ. ಆ ಬಳಿಕ ರೈತರು, ತಜ್ಞರು, ವಿಜ್ಞಾನಿಗಳು, ಇಲಾಖಾಧಿಕಾರಿಗಳು ಮತ್ತು ಬಾಹ್ಯ ಸಂಸ್ಥೆಗಳು ತಜ್ಞರ ತಾಂತ್ರಿಕ ಕಾರ್ಯಾಗಾರ ಒಂದರಲ್ಲಿ ಅನುಷ್ಠಾನದ ರೂಪುರೇಷೆಗಳನ್ನು ರೂಪಿಸಿದ್ದಾರೆ.

ಆಯ್ಕೆಯಾದ ಗ್ರಾಮದ ಎಲ್ಲೆಗೆರೆ ಸಮೀಕ್ಷೆಯನ್ನು ಬೆಂಗಳೂರಿನ ಸಾಮಾಜಿಕ ಮತ್ತು ಆರ್ಥಿಕ ಬದಲಾಣೆಯ ಅಧ್ಯಯನ ಸಂಸ್ಥೆಯು ಕೃಷಿ ವಿಜ್ಞಾನ ಕೇಂದ್ರದ ತಾಂತ್ರಿಕ ಸಹಾಯಹದಿಂದ ಕೈಗೊಂಡು, ವಿಶ್ಲೇಷಿಸಿ, ಫಲಿತಾಂಶವನ್ನು ನೀಡಿದೆ.

ಕೃಷಿ ವಿಜ್ಞಾನ ಕೇಂದ್ರವು ಈ ಯೋಜನೆಯ ಕೇಂದ್ರ ಸ್ಥಾನವಾಗಿದ್ದು, ಗ್ರಾಮ ಮಟ್ಟದಲ್ಲಿ ಅನುಷ್ಠಾನ ಘಟಕವನ್ನು ಸ್ಥಾಪಿಸಲಾಗಿದೆ. ಈ ಅನುಷ್ಠಾನ ಘಟಕ್ಕೆ ಒಬ್ಬರು ಯೋಜನಾ ಸಹಾಯಕರು ಮತ್ತು ಒಬ್ಬರು ಕ್ಷೇತ್ರ ಸಹಾಯಕರನ್ನು ನೇಮಿಸಲಾಗಿದೆ. ಕಾರ್ಯಕ್ರಮದ ಅಂಗವಾಗಿ ಗ್ರಾಮದಲ್ಲಿ ಅನುಷ್ಠಾನಗೊಳಿಸುವ ಪ್ರತಿಯೊಂದು ಕೆಲಸದಲ್ಲಿಯೂ ಇವರು ಸಹಕರಿಸುತ್ತಾರೆ.

ಎಲ್ಲೆಗೆರೆ ಸಮೀಕ್ಷೆ ಫಲಿತಾಂಶದ ಆಧಾರದ ಮೇಲೆ ಹಳ್ಳಿಯ ಪ್ರತಿ ಕುಟುಂಬದ ಆದಾಯ ಮತ್ತು ಕಲ್ಯಾಣ ವೃದ್ಧಿಯ ನೀಲಿ ನಕ್ಷೆಯನ್ನು ಬೆಂಗಳೂರಿನ **ಪ್ಲಸ್ ಟ್ರಸ್ಟ್** ನವರು, ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಮತ್ತು ರೈತರನ್ನೊಳಗೊಂಡು ತಯಾರಿಸಲಾಗಿದೆ.


ಕೃಷಿ ವಿಜ್ಞಾನ ಕೇಂದ್ರವು 25 ಮಂದಿ ಪ್ರಗತಿಶೀಲ ಉತ್ಸಾಹಿ ತರುಣ ರೈತರನ್ನು (ಮಹಿಳೆಯರೂ ಸೇರಿದಂತೆ) ಗುರುತಿಸಿ, ಕಾರ್ಯಾಗಾರ, ತರಬೇತಿ, ಶಿಕ್ಷಣ, ಪ್ರವಾಸ ಇತ್ಯಾದಿಗಳ ಮೂಲಕ ಕೃಷಿಯ ಬಗೆಗಿನ ಮೂಲ ಮನೋಭಾವ ಹಾಗು ದೃಷ್ಟಿಕೋನವನ್ನು ಆಶಾದಾಯಕವಾಗಿ ಪರಿವರ್ತಿಸುವ ಕಾರ್ಯ ಮಾಡುತ್ತದೆ.

ರೈತರ ಕಲ್ಯಾಣಕ್ಕೆ ಸಂಬಂಧಿಸಿದ ಎಲ್ಲಾ ಹಾಲಿ ಸರ್ಕಾರಿ ಯೋಜನಾ ಕಾರ್ಯಕ್ರಮಗಳ ಬಗ್ಗೆ ರೈತರಿಗೆ ಮನವರಿಕೆ ಮಾಡಿ, ಫಲಾನುಭವ ಸಿಗುವಂತೆ ಮಾಡಲು 12 ಗ್ರಾಮ ಸಭೆಗಳನ್ನು ನಡೆಸಲಾಯಿತು. ಜಿಲ್ಲಾ ಆರೋಗ್ಯ ಅಧಿಕಾರಿಗಳ ಮೂಲಕ 40 ವರ್ಷಕ್ಕೆ ಮೇಲ್ಪಟ್ಟ ಎಲ್ಲಾ ಪ್ರಾಥಮಿಕ ಆರೋಗ್ಯ ತಪಾಸಣೆಯನ್ನು ಮಾಡಿಸಲಾಯಿತು. ಹಾಗೂ ಗ್ರಾಮದ ಪ್ರತಿ ಕೃಷಿ ಭೂಮಿಯ ಮಣ್ಣು ಆರೋಗ್ಯ ತಪಾಸಣೆ ಕೂಡಾ ಮಾಡಿಸಲಾಯಿತು.

ಹಳ್ಳಿಯ ರೈತರು, ಕೃಷಿ ಕಾರ್ಮಿಕರು ಮತ್ತಿತರರಿಗೆ ಸೂಕ್ತ ಕರಕುಶಲ, ಕೃಷಿ ಆಧಾರಿತ ಮತ್ತು ಕೃಷಿಯೇತರ ಉದ್ದಿಮೆಯಲ್ಲಿ ತರಬೇತಿ, ವೃತ್ತಿಪರ ಶಿಕ್ಷಣ ನೀಡಿ ಅವರುಗಳ ಸಾಮರ್ಥ್ಯವನ್ನು ಹೆಚ್ಚಿಸಿ ಜೀವನೋಪಾಯ ಕಂಡುಕೊಳ್ಳುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ನಿರ್ದೇಶನ ನೀಡುವ ಜವಾಬ್ದಾರಿಯು ಜಿಲ್ಲಾಡಳಿತದ್ದಾಗಿರುತ್ತದೆ.

## ತೆಲ್ಲೂರ ಗ್ರಾಮದ ಸಾಮಾನ್ಯ ಮಾಹಿತಿ:

ತೆಲ್ಲೂರ ಗ್ರಾಮವು ಆಳಂದ ತಾಲೂಕಿನ ಕಲಬುರಗಿ ಜಿಲ್ಲೆಯಲ್ಲಿದೆ. ತೆಲ್ಲೂರ ಗ್ರಾಮವು ಕಲಬುರಗಿಯಿಂದ 33 ಕಿ.ಮೀ ಮತ್ತು ಆಳಂದದಿಂದ 32 ಕಿ.ಮೀ ದೂರದಲ್ಲಿದೆ.




| | | |
|---|---|---|
| **ಗ್ರಾಮದ ಹೆಸರು** | : | **ತೆಲ್ಲೂರು** |
| **ಗ್ರಾಮ ಪಂಚಾಯತ** | : | **ದಣ್ಣೂರು** |
| **ಹೋಬಳಿ** | : | **ನಿಂಬರ್ಗಾ** |
| **ತಾಲೂಕು** | : | **ಆಳಂದ** |
| **ಜಿಲ್ಲೆ** | : | **ಕಲಬುರಗಿ** |

**ಒಟ್ಟು ಭೌಗೋಳಿಕ ವಿಸ್ತೀರ್ಣ :–** 534.26 ಹೆ

**ಒಟ್ಟು ಕುಟುಂಬಗಳ ಸಂಖ್ಯೆ :–** 158

## ಗ್ರಾಮದ ಜನಸಂಖ್ಯೆ ವಿವರ

| ಕ್ರ.ಸಂ. | ವಿವರ | ಗಂಡು | ಹೆಣ್ಣು | ಒಟ್ಟು |
|---|---|---|---|---|
| 1 | ಜನಸಂಖ್ಯೆ | 597 | 593 | 1190 |
| 2 | ಪರಿಶಿಷ್ಟ ಜಾತಿ | 151 | 137 | 288 |
| 3 | ಪರಿಶಿಷ್ಟ ಪಂಗಡ | 0 | 0 | 0 |
| 4 | ವಿದ್ಯಾಭ್ಯಾಸ (%) | 83.78 | 62.8 | 73.1 |
| 5 | ಒಟ್ಟು ಕೆಲಸಗಾರರು | 270 | 219 | 489 |

## ಮೂಲ ಸೌಕರ್ಯಗಳು

| ಕ್ರ.ಸಂ. | ವಿವರ | ಷರಾ |
|---|---|---|
| 1 | ನೀರಿನ ಟ್ಯಾಂಕ್ | 3 |
| 2 | ಶಾಲೆ | 1–8 ನೇ ತರಗತಿಯವರೆಗೆ |
| 3 | ಪ್ರಾಥಮಿಕ ಆರೋಗ್ಯ ಕೇಂದ್ರ | ಗೋಳಾ(ಬಿ) (10 ಕಿ.ಮೀ. ದೂರದಲ್ಲಿದೆ) |
| 4 | ಗ್ರಾಮ ಪಂಚಾಯತಿ | ದಣ್ಣೂರ (10 ಕಿ.ಮೀ. ದೂರದಲ್ಲಿದೆ) |
| 5 | ರೈತ ಸಂಪರ್ಕ ಕೇಂದ್ರ | ನಿಂಬರ್ಗಾ(25 ಕಿ.ಮೀ ದೂರದಲ್ಲಿದೆ) |
| 6 | ಗ್ರಾಮ ಲೆಕ್ಕಾಧಿಕಾರಿಗಳು | ಗೋಳಾ(ಬಿ) (10 ಕಿ.ಮೀ. ದೂರದಲ್ಲಿದೆ) |
| 7 | ಪಶು ಚಿಕಿತ್ಸಾ ಕೇಂದ್ರ | ನರೋಣಾ (05 ಕಿ.ಮೀ ದೂರದಲ್ಲಿದೆ) |
| 8 | ಸಮುದಾಯ ಭವನ | 2 |
| 9 | ಶುದ್ಧ ಕುಡಿಯುವ ನೀರಿನ ಘಟಕ | ಇಲ್ಲ |
| 10 | ಪಶುಗಳಿಗೆ ಕುಡಿಯುವ ನೀರಿನ ಘಟಕ | 1 |
| 11 | ಸಮುದಾಯ ಬಟ್ಟೆ ತೊಳೆಯುವ ಘಟಕ | ಇಲ್ಲ |

## ಪ್ರಮುಖ ಬೆಳೆಗಳು

| ಕ್ರ.ಸಂ. | ಬೆಳೆ | ಎಕರೆಗಳಲ್ಲಿ |
|---|---|---|
| 1 | ತೊಗರಿ | 460 |
| 2 | ಹೆಸರು | 100 |
| 3 | ಉದ್ದು | 95 |
| 4 | ಎಳ್ಳು | 45 |
| 5 | ಜೋಳ | 235 |
| 6 | ಗೋಧಿ | 110 |
| 7 | ಕಡಲೆ | 85 |
| 8 | ಸಜ್ಜೆ | 90 |
| 9 | ಹತ್ತಿ | 125 |
| 10 | ಸೂರ್ಯಕಾಂತಿ | 138 |
| **ತೋಟಗಾರಿಕೆ ಬೆಳೆಗಳು** | | |
| ಚೆಂಡೂ ಹೂ, ಟೊಮ್ಯಾಟೊ, ಮೆಣಸಿನಕಾಯಿ, ನುಗ್ಗೆ, ಬದನೆಕಾಯಿ, , ಮಾವು | | |
| **ಪಶುಪಾಲನೆ** | | |
| ಆಕಳು, ಎಮ್ಮೆ, ಕುರಿ, ಕೋಳಿ ಸಾಕಾಣಿಕೆ | | |
| **ರೇಷ್ಮೆ** | | |
| ಹಿಪ್ಪುನೇರಳೆ – 5 ಎಕರೆ | | |
| **ಕೃಷಿ ಅರಣ್ಯ** | | |
| ತೇಗ, ಹೆಬ್ಬೆವು, ಬೇವು | | |



ದಿನಾಂಕ: 21–07–2019 **ಕೃಷಿ ಬೆಲೆ ಆಯೋಗದ ಮಾನ್ಯ ಅಧ್ಯಕ್ಷರಾದ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ** ರವರ ಅಧ್ಯಕ್ಷತೆಯಲ್ಲಿ **ಜಿಲ್ಲಾಧಿಕಾರಿಗಳ ಕಛೇರಿ ಕಲಬುರಗಿಯಲ್ಲಿ** ಸರ್ಕಾರಿಯ ಎಲ್ಲಾ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆ ಸಭೆಯನ್ನು ಕೈಗೊಳ್ಳಲಾಯಿತು.

## ಗ್ರಾಮದ ಚಿತ್ರಣ





# ಇಪ್ಪತ್ತೈದು ಜನ ರೈತರ ಮಾಹಿತಿ

| ಕ್ರ. ಸಂ | ರೈತರ ಹೆಸರು | ವಯಸ್ಸು | ಜಾತಿ | ವಿದ್ಯಾಭ್ಯಾಸ | ಹೊಂದಿದ ಭೂಮಿ (ಎಕರೆಗಳಲ್ಲಿ) | ನೀರಾವರಿ ಮೂಲ |
|---|---|---|---|---|---|---|
| 1 | ಮಲ್ಲಿಕಾರ್ಜುನ ಬಸಲಿಂಗಪ್ಪಾ ಪಾಟೀಲ್ | 35 | ಸಾಮಾನ್ಯ | ಎಸ್.ಎಸ್.ಎಲ್.ಸಿ | 04 | ಬಾವಿ |
| 2 | ವಿಜಯಕುಮಾರ ರಾಮಚಂದ್ರಪ್ಪಾ ಪಾಟೀಲ್ | 65 | ಸಾಮಾನ್ಯ | ಬಿ.ಎ | 9.50 | ಬಾವಿ |
| 3 | ನಿಂಗಮ್ಮ ಶಿವಕಂಕರಪ್ಪಾ ಪೋಲಿಸ್ ಪಾಟೀಲ್ | 65 | ಸಾಮಾನ್ಯ | 4ನೇ | 10 | ಬಾವಿ |
| 4 | ಸುಸಿಲಾಬಾಯಿ ನಾಗೇಂದ್ರಪ್ಪಾ ಪಾಟೀಲ್ | 40 | ಸಾಮಾನ್ಯ | 5ನೇ | 20 | ಬಾವಿ |
| 5 | ಗಿರಿಜಾಬಾಯಿ ಲಕ್ಕಪ್ಪಾ ಕೆರೆಅಂಬಲಗಾ | 50 | ಎಸ್.ಸಿ | ಅನಕ್ಷರಸ್ಥ | 03 | ಒಣಭೂಮಿ |
| 6 | ಮಲ್ಲಿಕಾರ್ಜುನ ಶರಣಪ್ಪಾ ವಾಲಿಕಾರ್ | 50 | ಎಸ್.ಸಿ | ಅನಕ್ಷರಸ್ಥ | 03 | ಬಾವಿ |
| 7 | ಮಹಾಂತಪ್ಪಾ ಗುರಣ್ಣಾ ದೂಳ್ | 35 | ಸಾಮಾನ್ಯ | 5ನೇ | 04 | ಬಾವಿ |
| 8 | ಮಲ್ಲಣ್ಣ ಶರಣಪ್ಪಾ ದೂಳ್ | 60 | ಸಾಮಾನ್ಯ | 7ನೇ | 15 | ಬಾವಿ |
| 9 | ನೀಲಕಂಠಪ್ಪಾ ಬಸವಣಪ್ಪಾ ಧೂಳ್ | 45 | ಸಾಮಾನ್ಯ | 7ನೇ | 04 | ಬಾವಿ |
| 10 | ಮಲ್ಲಯ್ಯ ಸೋಮಯ್ಯ ಸ್ವಾಮಿಮಠ | 30 | ಸಾಮಾನ್ಯ | ಅನಕ್ಷರಸ್ಥ | 10 | ಬಾವಿ |
| 11 | ಶಂಕರರಾವ ಗುರುಲಿಂಗಪ್ಪಾ ಮಾಲಿ ಪಾಟೀಲ್ | 51 | ಸಾಮಾನ್ಯ | 6ನೇ | 25 | ಬಾವಿ |
| 12 | ನಾಗರಾಜ ಹಣಮಂತರಾಯ ಕೋರೆ | 22 | ಸಾಮಾನ್ಯ | ಬಿ.ಬಿ.ಎಮ್ | 25 | ಬಾವಿ |
| 13 | ಮಡಿವಾಳಪ್ಪಾ ಈರಣ್ಣಾ ಕೋರೆ | 40 | ಸಾಮಾನ್ಯ | 5ನೇ | 15 | ಬಾವಿ |
| 14 | ಮಲ್ಲಪ್ಪಾ ಈರಣ್ಣಾ ಕೋರೆ | 35 | ಸಾಮಾನ್ಯ | 5ನೇ | 16 | ಬಾವಿ |
| 15 | ಧರ್ಮರಾಯ ಹಣಮಂತರಾಯ ಚೌಲ್ | 60 | ಸಾಮಾನ್ಯ | 7ನೇ | 7 | ಬಾವಿ |
| 16 | ಪರಮೇಶ್ವರ ಬಸವಣಪ್ಪಾ ಚೌಲ್ | 45 | ಸಾಮಾನ್ಯ | ಅನಕ್ಷರಸ್ಥ | 6.38 | ಬಾವಿ |
| 17 | ವಿಠಲ್ ಗುರಣ್ಣಾ ಚೌಲ್ | 45 | ಸಾಮಾನ್ಯ | 9ನೇ | 10 | ಒಣಭೂಮಿ |
| 18 | ಭೀಮರಾಯ ಕಾಶಿರಾಯ ಚೌಲ್ | 48 | ಸಾಮಾನ್ಯ | 5ನೇ | 2 | ಬಾವಿ |
| 19 | ಶಿವಶರಣಪ್ಪಾ ಹಣಮಂತರಾಯ ಚೌಲ್ | 65 | ಸಾಮಾನ್ಯ | 9ನೇ | 6 | ಒಣಭೂಮಿ |

| | | | | | | |
|---|---|---|---|---|---|---|
| 20 | ಶರಣಬಸಪ್ಪಾ ಸುಕೇಂದ್ರಪ್ಪ ನಾಯಿಕೊಡಿ | 35 | ಎಸ್.ಸಿ | 9ನೇ | 15 | ಬಾವಿ |
| 21 | ನಿಂಗರಾಜ ಈರಣ್ಣಾ ತಿಳಗೂಳ | 40 | ಸಾಮಾನ್ಯ | 9ನೇ | 45 | ಬಾವಿ |
| 22 | ಶಿವಶರಣಪ್ಪಾ ಅಪ್ಪಾರಾಯ ನಾವದಗಿ | 58 | ಎಸ್.ಸಿ | ಅನಕ್ಷರಸ್ಥ | 08 | ಬಾವಿ |
| 23 | ಬಂದಗಿಸಾಬ ಖಾಸಿಂಸಾಬ ಲದಾಫ್ | 50 | ಇತರೆ ಹಿಂದುಳಿದ ವರ್ಗ | ಅನಕ್ಷರಸ್ಥ | 03 | ಬಾವಿ |
| 24 | ಜಯದತ್ತ ರಾಮಚಂದ್ರ ಕಾಂಬಳೆ | 38 | ಎಸ್.ಸಿ | 7ನೇ | 02.20 | ಬಾವಿ |
| 25 | ದೇವಿಂದ್ರಪ್ಪಾ ಅಡೆವೆಪ್ಪಾ ಇಟಾಕರ್ | 62 | ಎಸ್.ಸಿ | 7ನೇ | 5 | ಬಾವಿ |

## ಗ್ರಾಮ ಸಮಿತಿ ಸದಸ್ಯರ ವಿವರ

| ಕ್ರ. ಸಂ | ರೈತರ ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ಶಿವಶರಣಪ್ಪಾ ಹೆಚ್ ಚೌಲ್ | 9591682914 |
| 2 | ವಿಜಯಕುಮಾರ ಆರ್. ಪಾಟಿಲ್ | 9740480839 |
| 3 | ಕಾಶಿನಾಥ ಎ. ಸಲಗರ್ | 8861346915 |
| 4 | ಸಿದ್ಧಾರೋಡ ಎಸ್. ಖಜೂರಿ | 9632573293 |
| 5 | ಶಂಕರರಾವ ಜಿ. ಪಾಟೀಲ್ | 9902163136 |
| 6 | ಶರಣಪ್ಪಾ ಎಸ್. ಕೋರಿ | 9901795347 |
| 7 | ಶ್ರೀಶೈಲ್ ಎಸ್. ಮಾಲಿ ಪಾಟೀಲ್ | 9845336940 |
| 8 | ಮಹ್ಮದ್ ಮರುಜಲಿ ಲತಾಫ್ | 8722283558 |
| 9 | ಗುರಪ್ಪಾ ಡಿ. ದೊಡ್ಡಮನಿ | 9972871026 |
| 10 | ಮಲ್ಲಿಕಾರ್ಜುನ್ ಎಸ್ | 9008225046 |

**ಈ ಯೋಜನೆ ಅಡಿಯಲ್ಲಿ ಕೈಗೊಂಡ ಚಟುವಟಿಕೆಗಳು:**



ಯೋಜನೆಯ ಪ್ರಾಯೋಗಿಕ ಅನುಷ್ಠಾನಕ್ಕೆ ಗ್ರಾಮ ಆಯ್ಕೆ ಮಾಡಲು ತೆಲ್ಲೂರ **ಗ್ರಾಮದ ಸಮೀಕ್ಷೆಯಲ್ಲಿ ತೊಡಗಿರುವ ಯೋಜನಾ ಸಹಾಯಕರು ಮತ್ತು ಕ್ಷೇತ್ರ ಸಹಾಯಕರು "ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ ಯೋಜನೆ'** ಬಗ್ಗೆ ರೈತರಿಗೆ ಮಾಹಿತಿ ನೀಡಿದರು.





ಮಾನ್ಯ **ಕೃಷಿ ಬೆಲೆ ಆಯೋಗದ ಅಧ್ಯಕ್ಷರಾದ ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿರವರು ತೆಲ್ಲೂರ ಗ್ರಾಮಕ್ಕೆ ಭೇಟಿ ನೀಡಿದ** ಸಂದರ್ಭದಲ್ಲಿ ರೈತರೊಂದಿಗೆ ಯೋಜನೆಯ ಕುರಿತ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ. ರಾಜು ಜಿ. ತೆಗ್ಗೆಳ್ಳಿ ಹಾಗೂ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಸಿದ್ರಾಮಪ್ಪ ಪಾಟೀಲ್ ಢಂಗಾಪುರ ಮತ್ತು ಗ್ರಾಮದ ಜನರು ಉಪಸ್ಥಿತರಿದ್ದರು.





ದಿನಾಂಕ: 24 ರಿಂದ 25–5–2017 ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗೆ ಅಗತ್ಯವಿರುವ ಅಂಶಗಳನ್ನು ಸಮೀಕ್ಷೆ ಮೂಲಕ ತಿಳಿಯುವುದು ಮತ್ತು ಬದಲಾವಣೆಗೆ ಅಗತ್ಯವಿರುವ ಅಂಶಗಳನ್ನು ಅರಿತು ಕಾರ್ಯನಿರ್ವಹಿಸಲೆಂದೇ ಇರುವ **ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ, ಬೆಂಗಳೂರಿನಲ್ಲಿ** ಜರುಗಿದ ಕೃಷಿ ಬೆಲೆ ಆಯೋಗದ 'ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ' ಯೋಜನೆಯ ಆಯ್ದ 25 ರೈತರನ್ನು 1 ದಿನದ **ರಾಷ್ಟ್ರೀಯ ಕಾರ್ಯಗಾರದಲ್ಲಿ** ಭಾಗಿಯಾಗಿದ್ದರು.



ದಿನಾಂಕ 16–08–2017 ರಂದು **PLUS TRUST ವತಿಯಿಂದ ಡಾ. ಪ್ರಭಾಕರ್ ಶೆಟ್ಟಿ** ರವರ ಮಾರ್ಗದರ್ಶನದಲ್ಲಿ ರೈತರಿಗೆ **ಸಮಗ್ರ ಕೃಷಿ ಪದ್ಧತಿ ಅಳವಡಿಕೆ**ಯಿಂದ ಆದಾಯದ ವಿವಿಧ, ಮೂಲಗಳನ್ನಾಗಿ ಮಾರ್ಪಾಡು ಮಾಡಿಕೊಳ್ಳುವುದರ, ಬಗ್ಗೆ ತಿಳಿಪಡಿಸುವುದರ ಜೊತೆಗೆ ಯೋಜನೆಯಡಿ , ಆಯ್ದ 25 ಜನ ರೈತರಿಗೆ ರೈತವಾರು ಲಭ್ಯವಿರುವ ಅನುಕೂಲಗಳು ಹಾಗೂ ಅವಶ್ಯಕತೆಗಳಿಗೆ ಅನುಸಾರ ಪ್ರತ್ಯೇಕ ಸಮಗ್ರ ಕೃಷಿ
ಪದ್ಧತಿಯ ಮಾದರಿಗಳನ್ನು ಅಳವಡಿಸಿಕೊಳ್ಳಲು ತಯಾರಿಸುವ ಸಲುವಾಗಿ ಹಮ್ಮಿಕೊಳ್ಳಲಾಗಿದೆ.








**ಮಣ್ಣಿನ ಮಾದರಿ ಸಂಗ್ರಹಣೆ :** ಮಣ್ಣಿನ ಆರೋಗ್ಯ ಹಾಗೂ ಫಲವತ್ತತೆ ಕಾಪಾಡುವ ಸಲುವಾಗಿ ಮಣ್ಣಿನ ಪ್ರಸ್ತುತ ಸ್ಥಿತಿಗತಿ ತಿಳಿದುಕೊಳ್ಳುವುದು ಹಾಗೂ ಗ್ರಾಮದ ಸಂಪನ್ಮೂಲಗಳ ಲಭ್ಯತೆಯ ನಕ್ಷೆ ತಯಾರಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಭೂ ಸರ್ವೇಕ್ಷಣಾ ಸಂಸ್ಥೆ (NBSS&LUP), ಬೆಂಗಳೂರು ಸಹಯೋಗದೊಂದಿಗೆ **ತೆಲ್ಲೂರ** ಗ್ರಾಮದ ರೈತರ ಜಮೀನಿನಲ್ಲಿ ಮಣ್ಣಿನ ಮಾದರಿಗಳನ್ನು ಸಂಗ್ರಹಿಸಲಾಯಿತು.



ಕುಟುಂಬ ವಿವರಗಳು, ಭೂ ಸ್ವಾಧೀನ, ನೀರಾವರಿ ಸೌಲಭ್ಯ, ಬೆಳೆದ ಬೆಳೆಗಳ ಕೃಷಿವೆಚ್ಚ, ಜಾನುವಾರುಗಳ ವಿವರಗಳು, ಸಾರ್ವಜನಿಕ ವಿತರಣಾ ವ್ಯವಸ್ಥೆಯ ವಿವರಗಳು, ಆದಾಯದ ವಿವರಗಳು, ಸಾಲದ ವಿವರಗಳು ಮತ್ತು ಸಾಮಾಜಿಕ ಆರ್ಥಿಕ ವಿವರಗಳಂತಹ ಕೃಷಿ ಮತ್ತು ಕೃಷಿಯೇತರ ವಿಷಯಗಳಿಗೆ ಸಂಬಂಧಿಸಿದಂತೆ **ತೆಲ್ಲೂರ ಗ್ರಾಮದಲ್ಲಿ ಎಲ್ಲೆಗೆರೆ ಸಮೀಕ್ಷೆ** ಮಾಡಲಾಯಿತು. ಕೃಷಿಯಲ್ಲಿ ಮುಂದುವರೆಯುವ ಮನೋಭಾವದ ಹಾಗೂ ಅಭಿಪ್ರಾಯದ ಕುರಿತು ಗ್ರಾಮೀಣ ಯುವಕರ ಮತ್ತು ರೈತ ಮಹಿಳೆಯರ ಸಮೀಕ್ಷೆ ಮಾಡುತ್ತಿರುವುದು





**We care society** ಸಹಯೋಗದೊಂದಿಗೆ ಗ್ರಾಮದ ರೈತರು ಹಾಗೂ ರೈತ ಕುಟುಂಬಗಳ ಪ್ರಸಕ್ತ ಸ್ಥಿತಿಗಳು, ಅವರ ಜಮೀನಿನ ಹಾಗೂ ಇತರೆ ಸಂಪನ್ಮೂಲಗಳ ಸ್ಥಿತಿಗತಿಗಳು ಮತ್ತು ಅವರು ಬಯಸತಕ್ಕಂತಹ ಬದಲಾವಣೆಗಳನ್ನು ಅರಿತುಕೊಳ್ಳುವ ಕುರಿತು ಕೈಗೊಂಡ **ಎಲ್ಲೆಗೆರೆ ಸಮೀಕ್ಷೆ.**





ದಿನಾಂಕ : 25–10–2017 ಹಾಗೂ 13–06–2018 ರಂದು ಕೃಷಿ ವಿಜ್ಞಾನ ಕೇಂದ್ರ, ಕಲಬುರಗಿ ಹಾಗೂ ಪಶುಸಂಗೋಪನಾ ಇಲಾಖೆ ಕಲಬುರಗಿ ಸಹಭಾಗಿತ್ವದಲ್ಲಿ **ಪಶು ಆರೋಗ್ಯ ತಪಾಸಣಾ ಶಿಬಿರವನ್ನು** ತೆಲ್ಲೂರಿನಲ್ಲಿ ಆಯೋಜಿಸಲಾಯಿತು. ಈ ಶಿಬಿರಗಳಲ್ಲಿ ಒಟ್ಟು 712 ಜಾನುವಾರುಗಳಿಗೆ ಚಿಕಿತ್ಸೆ ನೀಡಲಾಯಿತು, ಸುಮಾರು 115 ರೈತರು ಪಶು ಆರೋಗ್ಯ ಶಿಬಿರದ ಮೂಲಕ ಪ್ರಯೋಜನ ಪಡೆದುಕೊಂಡರು.





**ಕೆ.ಎಮ್.ಸಿ ಮಣಿಪಾಲ್**ನ ಡಾ. ಶಂಕರ್ ಮತ್ತು ಅವರ ತಂಡದ ಸಹಯೋಗದೊಂದಿಗೆ ದಿನಾಂಕ: 04–07–2017 ರಂದು ಆರೋಗ್ಯ ಶಿಬಿರವನ್ನು ತೆಲ್ಲೂರ **ರೈತರಿಗೆ ಆರೋಗ್ಯ ತಪಸಾಣೆ ಶಿಬಿರವನ್ನು** ಆಯೋಜಿಸಲಾಯಿತು. 100 ರೈತರು ತಮ್ಮ ಆರೋಗ್ಯವನ್ನು ಪರೀಕ್ಷಿಸಿಕೊಂಡರು. ರೈತರ ರಕ್ತ ಮತ್ತು ಮೂತ್ರವನ್ನು ಸಂಗ್ರಹಿಸಿ, ಅದರಲ್ಲಿ ಸಕ್ಕರೆ, ಹಿಮೋಗ್ಲೋಬಿನ್ ಅಂಶ ಮತ್ತು ರಕ್ತದಲ್ಲಿನ ಕೀಟನಾಶಕಗಳ ಪರಿಣಾಮವನ್ನು ಗುರುತಿಸಲಾಯಿತು.





ದಿನಾಂಕ: 24.09.2018 ರಂದು ತೆಲ್ಲೂರ ಗ್ರಾಮದಲ್ಲಿ ಕೆಎಪಿಸಿ ಸಿಬ್ಬಂದಿಯವರು ರೈತರ ಸಹಯೋಗದೊಂದಿಗೆ **"ಸ್ವಚ್ಛತಾ–ಹೀ– ಸೇವಾ"** ಕಾರ್ಯಕ್ರಮವನ್ನು ಆಯೋಜಿಸಿದರು. ಈ ಸ್ವಚ್ಛತಾ ಕಾರ್ಯಕ್ರಮದಲ್ಲಿ, ಇಡೀ ಗ್ರಾಮದ ಕಸವನ್ನು ಗೂಡಿಸಿ, ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಲಾಯಿತು.







ದಿನಾಂಕ: 15-09-2018 ರಂದು **ಪಶು ಆಸ್ಪತ್ರೆ ಕಡಗಂಚಿಯ**ಲ್ಲಿ ಹಿರಿಯ ಪಶು ವೈದ್ಯಾಧಿಕಾರಿ ಡಾ. ಶಂಕರ್ ಕಣ್ಣಿ ಯವರಿಗೆ ತೆಲ್ಲೂರಿನ ಆಯ್ದ 25 ರೈತರ ಅರ್ಜಿಗಳನ್ನು **ಪಶುಭಾಗ್ಯ ಯೋಜನೆ** ಅಡಿಯಲ್ಲಿ ಸೇರಿಸಬೇಕೆಂದು ಕೆಎಪಿಸಿ ಸಿಬ್ಬಂದಿಯವರು ಹಾಗೂ ತೆಲ್ಲೂರಿನ ಗ್ರಾಮಸ್ಥರು ಮನವಿ ಮಾಡಿದರು.



ದಿನಾಂಕ: 18-09-2018 ರಂದು ತೆಲ್ಲೂರ ರೈತರ ಸಹಯೋಗದೊಂದಿಗೆ ಕೆವಿಕೆಯ ಮುಖ್ಯಸ್ಥರು ಡಾ. ರಾಜು ಜಿ. ತೆಗ್ಗೆಳ್ಳಿ ರವರು **ಕಲಬುರಗಿ ಜಿಲ್ಲಾಧಿಕಾರಿ ಶ್ರೀ ವೆಂಕಟೇಶ್ ಕುಮಾರ್** ಅವರನ್ನು ಭೇಟಿ ಮಾಡಿದರು. ಈ ಭೇಟಿಯ ಸಂದರ್ಭದಲ್ಲಿ, ತೆಲ್ಲೂರಿನಲ್ಲಿ ತೊಗರಿ ಖರೀದಿ ಕೇಂದ್ರ, ಬೀಜ ಉಗ್ರಾಣ ಘಟಕ ಸ್ಥಾಪನೆ ಹಾಗೂ ವಿವಿಧ ಕೃಷಿ ಹಾಗೂ ಕೃಷಿಗೆ ಸಂಬಂಧಪಟ್ಟಂತಹ ಇಲಾಖೆಗಳಲ್ಲಿ ದೊರೆಯುವಂತಹ ಸೌಲಭ್ಯಗಳನ್ನು ತೆಲ್ಲೂರ ರೈತರಿಗೆ ಮೊದಲ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು.



ದಿನಾಂಕ: 05–01–2019 ರಂದು **ಪ್ಲಸ್ ಟ್ರಸ್ಟ್ ಅಧ್ಯಕ್ಷರಾದ ಡಾ. ಪ್ರಭಾಕರ್ ಶೆಟ್ಟಿ** ರವರ ಅಧ್ಯಕ್ಷತೆಯಲ್ಲಿ ಕೃಷಿ ಇಲಾಖೆ ಹಾಗೂ ಕೃಷಿಗೆ ಸಂಬಂಧಪಟ್ಟ ಸಹಾಯಕ ನಿರ್ದೇಶಕರೊಂದಿಗೆ ಇಲಾಖೆಯ ಯಾವುದೇ ಸರ್ಕಾರಿ ಯೋಜನೆಗಳನ್ನು ತೆಲ್ಲೂರಿಗೆ ರೈತರಿಗೆ ಮೊದಲ ಆದ್ಯತೆ ನೀಡಬೇಕೆಂದು ತಿಳಿಸಿದರು. ಈ ಸಭೆಯು ರೈತ ಸಂಪರ್ಕ ಕೇಂದ್ರ, ಆಳಂದದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆವಿಕೆಯ ಮುಖ್ಯಸ್ಥರಾದ ಡಾ. ರಾಜು ಜಿ. ತೆಗ್ಗೆಳ್ಳಿ, ಕೆಎಪಿಸಿಯ ಸಂಶೋಧನಾ ಸಹಾಯಕರು ಮತ್ತು ಕ್ಷೇತ್ರ ಸಹಾಯಕರು ಭಾಗವಹಿಸಿದರು.



ದಿನಾಂಕ: 23–01–2019 ರಂದು ಕೆವಿಕೆಯ ಮುಖ್ಯಸ್ಥರಾದ ಡಾ. ರಾಜು ಜಿ. ತೆಗ್ಗೆಳ್ಳಿ ಯವರು **ತೊಗರಿ ಹಾಗೂ ಕಡಲೆ ಬೀಜಗಳ ಮೌಲ್ಯವರ್ಧನೆ ಹಾಗೂ ಮಾರುಕಟ್ಟೆಯ** ಬಗ್ಗೆ ತಿಳಿಸಿದರು. ಕೆವಿಕೆಯ ಪ್ರಾಣಿ ವಿಜ್ಞಾನಿಯಾದ ಡಾ. ಮಂಜುನಾಥ ಪಾಟೀಲ್ ರವರು ವೈಜ್ಞಾನಿಕ ಹೈನುಗಾರಿಕೆಯಲ್ಲಿ ಮೇವಿನ ಬೆಳೆಗಳ ಮಹತ್ವದ ಬಗ್ಗೆ ಮಾಹಿತಿ ನೀಡಿದರು.

**ತೆಲ್ಲೂರ ರೈತರಿಗೆ ಅಧ್ಯಯನ ಪ್ರವಾಸ:**

**ಪ್ರಗತಿಪರ ರೈತರು, ಶ್ರೀನಿವಾಸ ಸರಡಗಿ, ಕಲಬುರಗಿ ಜಿಲ್ಲೆ ಹೊಲಕ್ಕೆ ಭೇಟಿ:**





ದಿನಾಂಕ: 24–12–2017 ರಂದು **ಶ್ರೀ ದೇವೇಂದ್ರಪ್ಪ ಬೆರಜಿ, ಪ್ರಗತಿಪರ ರೈತರು ಶ್ರೀನಿವಾಸ ಸರಡಗಿ, ಕಲಬುರಗಿ ಜಿಲ್ಲೆಯ** ಹೊಲಕ್ಕೆ ಭೇಟಿ ನೀಡಲಾಯಿತು. ಈ ಭೇಟಿಯಲ್ಲಿ, ತೊಗರಿಯಲ್ಲಿ ಪಲ್ಸ್ ಮ್ಯಾಜಿಕ್ ಉಪಯೋಗ ಮತ್ತು ಎರೆಹುಳು ಘಟಕಗಳ ನಿರ್ವಹಣೆಯಿಂದ ಆಗುವ ಲಾಭದ ಬಗ್ಗೆ ಪ್ರಾತ್ಯಕ್ಷಿಕೆ ಮುಖಾಂತರ ತಿಳುವಳಿಕೆ ಮೂಡಿಸಲಾಯಿತು.

**ಐ.ಸಿ.ಎ.ಆರ್ – ಕೃಷಿ ವಿಜ್ಞಾನ ಕೇಂದ್ರ, ಬೀದರ್‌ಗೆ ಭೇಟಿ:**



ದಿನಾಂಕ: 28–08–2017 ರಂದು ಕೃಷಿ ವಿಜ್ಞಾನ ಕೇಂದ್ರ, ಬೀದರ್‌ಗೆ ಭೇಟಿ ನೀಡಲಾಯಿತು. ಈ ಭೇಟಿಯಲ್ಲಿ ಸಮಗ್ರ ಕೃಷಿ ಪದ್ಧತಿಯಿಂದ ನಿರಂತರ ಆದಾಯದ ಬಗ್ಗೆ ತಿಳುವಳಿಕೆ ಮೂಡಿಸಲಾಯಿತು.

**ಕೃಷಿ ಮೇಳ, ಕಲಬುರಗಿ**




ದಿನಾಂಕ: 25–11–2017 ರಂದು ಕೃಷಿ ವಿಜ್ಞಾನ ಕೇಂದ್ರ, ಕಲಬುರಗಿಯಲ್ಲಿ ನಡೆದ ಕೃಷಿ ಮೇಳದಲ್ಲಿ ತೆಲ್ಲೂರಿನ ರೈತರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ **ಕಲಬುರಗಿ ದಕ್ಷಿಣ ಮತ ಕ್ಷೇತ್ರದ ಶಾಸಕರಾದ ಶ್ರೀ ದತ್ತಾತ್ರೇಯ ಪಾಟೀಲ್ ರೇವೂರ್** ಹಾಗೂ ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ವಿಸ್ತರಣಾ ನಿರ್ದೇಶಕರಾದ ಡಾ. ಎಸ್.ಕೆ.ಮೇಟಿ ರವರೊಂದಿಗೆ ಸಮಗ್ರ ಕೃಷಿ ಪದ್ಧತಿಯಿಂದ ರೈತರಿಗೆ ಆಗುವ ಲಾಭಗಳ ಬಗ್ಗೆ ಚರ್ಚಿಸಲಾಯಿತು.

## ಈ ಯೋಜನೆ ವತಿಯಿಂದ ವಿವಿಧ ಇಲಾಖೆಗಳಿಂದ ರೈತರಿಗೆ ದೊರಕಿರುವ ಸೌಲಭ್ಯಗಳು

**ಕೃಷಿ ಇಲಾಖೆ:**





**ಕೃಷಿ ಭಾಗ್ಯ ಯೋಜನೆ :** ಈ ಯೋಜನೆ ಅಡಿಯಲ್ಲಿ 8 ರೈತರು ಫಲಾನುಭವಿಗಳಾಗಿದ್ದಾರೆ. ಪ್ರತಿ ರೈತರಿಗೆ ರೂ. 64,000/– ನಷ್ಟು ಮಂಜೂರಾಗಿದೆ. ಇನ್ನು 11 ರೈತರು ಮಂಜೂರು ಆಗುವ ಹಂತದಲ್ಲಿದ್ದಾರೆ.

**ತಾಡಪತ್ರಿ ವಿತರಣೆ :** ಕೃಷಿ ಇಲಾಖೆಯಿಂದ ದೊರೆಯುವ ಟಾರ್ಪಲಿನ್‌ಗಳನ್ನು 4 ರೈತರು ಪಡೆದುಕೊಂಡಿರುತ್ತಾರೆ. ಇದರಿಂದ ಅವರಿಗೆ ರಾಶಿ ಮಾಡುವಾಗ ಅನುಕೂಲವಾಗುತ್ತದೆ.

**ಕೃಷಿ ಯಂತ್ರಧಾರೆ :** ಈ ಯೋಜನೆ ಅಡಿಯಲ್ಲಿ 27 ರೈತರು ಅರ್ಜಿಗಳನ್ನು ಸಲ್ಲಿಸಲಾಗಿದ್ದು, ಇದರಲ್ಲಿ ಒಬ್ಬರಿಗೆ ಮಂಜೂರಾಗಿದೆ.

**ತೋಟಗಾರಿಕಾ ಇಲಾಖೆ** :






ತೋಟಗಾರಿಕೆ ಇಲಾಖೆಯಿಂದ ನುಗ್ಗೆ ಸಸಿಗಳನ್ನು ಹಚ್ಚಲು 2 ಎಕರೆ ಪ್ರದೇಶದಲ್ಲಿ ನಾಟಿ ಮಾಡಲು ಮತ್ತು ನೀರು ಸಂಗ್ರಹಣೆಗಾಗಿ ಕೃಷಿ ಹೊಂಡ ತೆಗೆಯಲು ರೂ. 75,000/– ನಷ್ಟು ಪಡೆದುಕೊಂಡಿರುತ್ತಾರೆ.

**ರೇಷ್ಮೆ ಇಲಾಖೆ :**





ಈ ಇಲಾಖೆಯಿಂದ ಹಿಪ್ಪುನೇರಳೆ ಸಸಿಗಳನ್ನು ನಾಟಿ ಮಾಡಲು ಮತ್ತು ರೇಷ್ಮೆಹುಳು ಸಾಕಾಣಿಕೆ ಘಟಕವನ್ನು 2 ರೈತರಿಗೆ ಮಂಜೂರು ಮಾಡಿದ್ದಾರೆ.

**ಪಶು ಸಂಗೋಪನಾ ಇಲಾಖೆ :**





ಈ ಇಲಾಖೆಯಿಂದ 11 ರೈತರಿಗೆ ರಾಜೀವ್ ಗಾಂಧಿ ಚೈತನ್ಯ ಸ್ವ ಉದ್ಯೋಗ ಯೋಜನೆ ಅಡಿಯಲ್ಲಿ ಸ್ಥಳೀಯ ಜಾನುವಾರುಗಳನ್ನು ಪ್ರತಿ ಜಾನುವಾರಿಗೆ ರೂ. 30,000/– ನಷ್ಟು ಪಡೆದುಕೊಂಡಿರುತ್ತಾರೆ.

ಪಶುಭಾಗ್ಯ ಯೋಜನೆ ಅಡಿಯಲ್ಲಿ 25 ರೈತರ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಜಿಲ್ಲಾ ಪಂಚಾಯತ ಸದಸ್ಯರು, ಕಡಗಂಚಿ ಅವರ ಅನುದಾನದಲ್ಲಿ 6 ವಾರದ ಗಿರಿರಾಜ ಕೋಳಿಗಳನ್ನು ವಿತರಣೆ ಮಾಡಬೇಕಾಗಿರುತ್ತದೆ. ಒಬ್ಬ ರೈತನಿಗೆ 10 ಕೋಳಿಗಳಂತೆ ಒಟ್ಟು 10 ಫಲಾನುಭವಿಗಳು ಆಯ್ಕೆಯಾಗಿದ್ದಾರೆ.

**ಪಂಚಾಯತ ರಾಜ್ಯ ಮತ್ತು ಗ್ರಾಮೀಣ ಅಭಿವೃದ್ಧಿ ಇಲಾಖೆ :**





**ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಗ್ರಾಮೀಣ ಯೋಜನೆ** (MGNAREGA) : ತೆಲ್ಲೂರ ಗ್ರಾಮಸ್ಥರಿಗೆ ದಣ್ಣೂರ ಗ್ರಾಮ ಪಂಚಾಯತ, ಪಂಚಾಯತ ಅಭಿವೃದ್ಧಿ ಅಧಿಕಾರಿರವರಿಂದ MGNAREGA ಯೋಜನೆಯ ಬಗ್ಗೆ ಮಾಹಿತಿ ನೀಡಲಾಯಿತು. ಇದಲ್ಲದೇ, ಗ್ರಾಮ ಪಂಚಾಯತಿ ವತಿಯಿಂದ ಉದ್ಯೋಗ ಖಾತ್ರಿ ಕಾರ್ಡ್ 100 ರೈತರಿಗೆ ಮಾಡಿಸಿ, ರೈತರಿಗೆ ವಿತರಿಸಲಾಯಿತು. ಇದರ ಫಲವಾಗಿ, ದಿನಾಂಕ 07–08–2018 ರಿಂದ ಕೆಲಸ ಪ್ರಾರಂಭವಾಗಿ, ಸುಮಾರು 3 ತಿಂಗಳಲ್ಲಿ ಸಾರ್ವಜನಿಕವಾಗಿ ಹೊಲಗಳ ಬದುಗಳ ಪಕ್ಕದಲ್ಲಿ ಕೆಲಸ ಮಾಡಿ, 3 ಕೆರೆಗಳನ್ನು ನಿರ್ಮಿಸಿದ್ದಾರೆ.

**ಕೃಷಿ ವಿಜ್ಞಾನ ಕೇಂದ್ರ ಕಲಬುರಗಿ :**







ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ ಅಡಿಯಲ್ಲಿ ತೆಲ್ಲೂರ ಗ್ರಾಮದ ಪ್ರತಿಯೊಬ್ಬ ರೈತ ಕುಟುಂಬಕ್ಕೆ (158 ಫಲಾನುಭವಿಗಳಿಗೆ)ಪಲ್ಸ್ ಮ್ಯಾಜಿಕ್ ಎಂಬ ಪೋಷಕಾಂಶಯುಕ್ತ ಗೊಬ್ಬರವನ್ನು ಒದಗಿಸಲಾಗಿದೆ. ಸುಮಾರು ರೂ. 79,000/– ಮೊತ್ತದ ಪಲ್ಸ್ ಮ್ಯಾಜಿಕ್‌ನ್ನು ವಿತರಿಸಲಾಯಿತು. ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಮಹೇಶ್ವರಯ್ಯ, ವಲಯ ಸಂಶೋಧನಾ ಕೇಂದ್ರ, ಕಲಬುರಗಿ ಸಂಶೋಧನಾ ನಿರ್ದೇಶಕರಾದ ಡಾ. ಜೆ. ಆರ್. ಪಾಟೀಲ್ ಹಾಗೂ ಕೆವಿಕೆಯ ಮುಖ್ಯಸ್ಥರಾದ ಡಾ. ರಾಜು ಜಿ. ತೆಗ್ಗೆಳ್ಳಿ ಹಾಗೂ ತೆಲ್ಲೂರ ಗ್ರಾಮಸ್ಥರು ಉಪಸ್ಥಿತರಿದ್ದರು.

**ಕೃಷಿ ವಿಜ್ಞಾನ ಕೇಂದ್ರ ಕಲಬುರಗಿಯ ತೆಲ್ಲೂರ ಗ್ರಾಮದಲ್ಲಿ ಕೈಗೊಂಡ ಪ್ರಥಮ ಸಾಲಿನ ಪ್ರಾತ್ಯಕ್ಷಿಕೆಯ ಚಿತ್ರಣಗಳು:**







ಹತ್ತಿ ಬೆಳೆಯಲ್ಲಿ ಕೀಟನಾಶಕ ಸಿಂಪಡಿಸುವುದಕ್ಕಿಂತ ಮುಂಚೆ ಸುರಕ್ಷಾ ಕವಚ ಧರಿಸಿ, ಕೀಟನಾಶಕ ಸಿಂಪಡಿಸುವುದನ್ನು ಪ್ರಾತ್ಯಕ್ಷಿಕೆ ಮುಖಾಂತರ ತೋರಿಸಿರುವುದು.







ಹತ್ತಿ ಬೆಳೆಯಲ್ಲಿ ಹಳದಿ ಅಂಟು ಬಲೆಗಳನ್ನು ಅಳವಡಿಸಿರುವುದು.






**ನವಣೆ HMT-101 ತಳಿಯ ತೆಲ್ಲೂರ ರೈತರ ಹೊಲದಲ್ಲಿ ಪ್ರಾತ್ಯಕ್ಷಿಕೆ**




**ಸೂರ್ಯಕಾಂತಿ ಬೀಜವನ್ನು ತೆಲ್ಲೂರ ರೈತರಿಗೆ ನೀಡಿರುವುದು.**

**ಕೃಷಿ ವಿಜ್ಞಾನ ಕೇಂದ್ರ ಕಲಬುರಗಿಯ ತೆಲ್ಲೂರ ಗ್ರಾಮದಲ್ಲಿ ಕೈಗೊಂಡ ಪ್ರಥಮ ಸಾಲಿನ ಪ್ರಾತ್ಯಕ್ಷಿಕೆಗಳ ವಿವರ :**

| ಕ್ರ.ಸಂ. | ಪ್ರಾತ್ಯಕ್ಷಿಕೆ ವಿವರ | ಕ್ಷೇತ್ರ (ಹೆ) | ಫಲಾನುಭವಿಗಳ ಸಂಖ್ಯೆ | ಇಳುವರಿ (ಕ್ವಿಂ./ಹೆ) | | ಶೇಕಡವಾರು ಇಳುವರಿ ಹೆಚ್ಚಳ |
|---|---|---|---|---|---|---|
| | | | | ಪ್ರಾತ್ಯಕ್ಷಿಕೆ | ರೈತರ ಪದ್ಧತಿ | |
| 01 | ಹತ್ತಿ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಪದ್ಧತಿಗಳು | 4 | 10 | 25.5 | 21.97 | 16.45 |
| 02 | ಸೂರ್ಯಕಾಂತಿ ಬೆಳೆಯಲ್ಲಿ ಕೀಟ ಮತ್ತು ರೋಗ ನಿರ್ವಹಣೆ ಪ್ರಾತ್ಯಕ್ಷಿಕೆ | 10 | 25 | 15.00 | 13.25 | 13.00 |
| 03 | ಸಿರಿಧಾನ್ಯಗಳನ್ನು ಪರಿಚಯಿಸುವಿಕೆ | 10 | 25 | 10.00 | 8.31 | 20.30 |
| 04 | ತೊಗರಿ ಬೆಳೆಯಲ್ಲಿ ಹೊಸ ತಳಿ ಪರಿಚಯ ಮತ್ತು ನಿರ್ವಹಣೆ ಪದ್ಧತಿಗಳು | 10 | 25 | 15.54 | 12.67 | 12.65 |
| 05 | ಕಡಲೆ ಬೆಳೆಯಲ್ಲಿ ಹೊಸ ತಳಿಯಾದಂತಹ ಬಿಜಿಡಿ–103 ತಳಿಯ ಪರಿಚಯ ಮತ್ತು ನಿರ್ವಹಣೆ ಪದ್ಧತಿಗಳು | 18 | 45 | 13.35 | 10.97 | 22.36 |
| 06 | ತರಕಾರಿ ಬೀಜದ ಕಿಟ್ ಹಾಗೂ ಔಷಧಿಗಳ ವಿತರಣೆ | 1 | 03 | ತರಕಾರಿ ಬೀಜದ ಕಿಟ್ ಹಾಗೂ ಔಷಧಿಗಳನ್ನು ವಿತರಿಸಲಾಗಿದೆ. | | |

| | | | | | |
|---|---|---|---|---|---|
| **ಒಟ್ಟು ಹೆ/ರೈತರು** | 53 | 133 | – | – | – |

## ಕರ್ನಾಟಕ ಕೃಷಿ ಬೆಲೆ ಆಯೋಗ ಕೈಗೊಂಡ ಪ್ರಥಮ ಸಾಲಿನ ಪ್ರಾತ್ಯಕ್ಷಿಕೆಯ ಚಿತ್ರಣಗಳು:



ತೊಗರಿಯ ಜಿಆರ್‌ಜಿ–811 ತಳಿ ಬೀಜವನ್ನು ತೆಲ್ಲೂರ ರೈತರಿಗೆ ನೀಡಿರುವುದು.






ಚೆಂಡೂ ಹೂವಿನ ತಳಿಯಾದಂತಹ ಅರ್ಕಾ ಬಂಗಾರ–2 ತಳಿಯನ್ನು ತೆಲ್ಲೂರಿನಲ್ಲಿ ಪರಿಚಯಿಸಿರುವುದು.






ಎರೆಹುಳು ಗೊಬ್ಬರ ಘಟಕ ನಿರ್ಮಿಸುವುದಕ್ಕಾಗಿ ಪ್ಲಾಸ್ಟಿಕ್ ಎರೆತೊಟ್ಟಿಗಳನ್ನು ವಿತರಿಸಿರುವುದು ಹಾಗೂ ಪದ್ಧತಿ ಪ್ರಾತ್ಯಕ್ಷಿಕೆಯ ಮುಖಾಂತರ ತೋರಿಸಿರುವುದು.

**ಕರ್ನಾಟಕ ಕೃಷಿ ಬೆಲೆ ಆಯೋಗ ಕೈಗೊಂಡ ಪ್ರಥಮ ಸಾಲಿನ ಪ್ರಾತ್ಯಕ್ಷಿಕೆಗಳ ವಿವರಗಳು :**

| ಕ್ರ.ಸಂ. | ಪ್ರಾತ್ಯಕ್ಷಿಕೆ ವಿವರ | ಕ್ಷೇತ್ರ (ಹೆ) | ಫಲಾನುಭವಿಗಳ ಸಂಖ್ಯೆ | ಇಳುವರಿ (ಕ್ವಿಂ./ಹೆ) | | ಶೇಕಡವಾರು ಇಳುವರಿ ಹೆಚ್ಚಳ |
|---|---|---|---|---|---|---|
| | | | | ಪ್ರಾತ್ಯಕ್ಷಿಕೆ | ರೈತರ ಪದ್ಧತಿ | |
| 01 | ತೊಗರಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ | 10 | 25 | 14.00 | 12.50 | 12.00 |
| 02 | ಹತ್ತಿಯಲ್ಲಿ ರಸ ಹೀರುವ ಕೀಟಗಳ ನಿರ್ವಹಣೆ | 1.6 | 04 | 25.00 | 22.25 | 12.36 |
| 03 | ಚೆಂಡೂ ಹೂವಿನ ತಳಿಯಾದಂತಹ ಅರ್ಕಾ ಬಂಗಾರ–2 ತಳಿಯನ್ನು ಪರಿಚಯಿಸುವಿಕೆ | 0.4 | 01 | 10.00 | 7.50 | 33.33 |
| 04 | ಎರೆಹುಳು ಘಟಕಗಳನ್ನು 5 ರೈತರ ಕ್ಷೇತ್ರಗಳಲ್ಲಿ ಸ್ಥಾಪಿಸಲಾಗಿದೆ. | – | 05 | ಎರೆಹುಳು ಘಟಕಗಳ ಸ್ಥಾಪನೆಗೆ 5 ರೈತರಿಗೆ ಎರೆಹುಳದ ಪ್ಲಾಸ್ಟಿಕ್ ತೊಟ್ಟಿಗಳನ್ನು ವಿತರಿಸಲಾಗಿದೆ. | | |
| **ಒಟ್ಟು ಹೆ/ರೈತರು** | | 12 | 30 | - | – | – |

## ಕೃಷಿ ವಿಜ್ಞಾನ ಕೇಂದ್ರದಿಂದ ಕೈಗೊಂಡ ಕ್ಷೇತ್ರ ಪ್ರಯೋಗಗಳ ಚಿತ್ರಣಗಳು :



**ತೊಗರಿಯಲ್ಲಿ ರೈಜೋಬಿಯಂದಿಂದ ಬೀಜೋಪಚಾರ ಮಾಡುವುದು**



**ಉದ್ದಿನಲ್ಲಿ ಸುರಕ್ಷತಾ ಕವಚವನ್ನು ಬಳಸಿ ಕಳೆನಾಶಕವನ್ನು ಉಪಯೋಗಿಸುತ್ತಿರುವುದು**






**ಹೆಸರಿನ ಬೆಳೆಯಲ್ಲಿ ಪಲ್ಸ್ ಮ್ಯಾಜಿಕ್‌ನ ಉಪಯೋಗ**




### ಕೃಷಿ ವಿಜ್ಞಾನ ಕೇಂದ್ರದಿಂದ ಕೈಗೊಂಡ ಕ್ಷೇತ್ರ ಪ್ರಯೋಗಗಳ ವಿವರಗಳು :

| ಕ್ರ.ಸಂ. | ಕ್ಷೇತ್ರ ಪ್ರಯೋಗಗಳು | ಕ್ಷೇತ್ರ (ಹೆ) | ಫಲಾನುಭವಿಗಳ ಸಂಖ್ಯೆ | ಇಳುವರಿ (ಕ್ವಿಂ./ಹೆ) | | ಶೇಕಡವಾರು ಇಳುವರಿ ಹೆಚ್ಚಳ |
|---|---|---|---|---|---|---|
| | | | | ಪ್ರಾತ್ಯಕ್ಷಿಕೆ | ರೈತರ ಪದ್ಧತಿ | |
| 01 | ತೊಗರಿಯಲ್ಲಿ ರೈಜೋಬಿಯಂದಿಂದ ಬೀಜೋಪಚಾರ ಮಾಡುವುದು. | 3.2 | 04 | 14.25 | 13.00 | 09.61 |
| 02 | ಉದ್ದಿನಲ್ಲಿ ಕಳೆನಾಶಕ ಉಪಯೋಗಿಸಿ ಕಳೆ ನಿರ್ವಹಣೆ ಮಾಡುವುದು | 0.8 | 02 | 09.50 | 09.00 | 05.56 |
| 03 | ಉದ್ದಿನ ಬೆಳೆಯಲ್ಲಿ ಪಲ್ಸ್ ಮ್ಯಾಜಿಕ್ ಉಪಯೋಗ | 2.0 | 04 | 11.25 | 09.75 | 15.39 |
| 04 | ಹೆಸರಿನ ಬೆಳೆಯಲ್ಲಿ ಪಲ್ಸ್ ಮ್ಯಾಜಿಕ್‌ನ ಉಪಯೋಗ | 1.0 | 02 | 12.50 | 10.75 | 16.28 |
| 05 | ತೊಗರಿ ಬೆಳೆಯಲ್ಲಿ ಹೋಮಿಯೋಪತಿ ಔಷದಿ ದ್ರಾವಣದ ಉಪಯೋಗ | 1.0 | 02 | 11.75 | 10.50 | 11.91 |
| **ಒಟ್ಟು ಹೆ/ರೈತರು** | | 8 | 14 | – | – | – |

## ಕರ್ನಾಟಕ ಕೃಷಿ ಬೆಲೆ ಆಯೋಗ ಆಯೋಜಿಸಿದ ಕಾರ್ಯಗಾರಗಳು :






ಐಸೆಕ್ (ISEC) ಬೆಂಗಳೂರಿನಲ್ಲಿ ಜರುಗಿದ ಕೃಷಿ ಬೆಲೆ ಆಯೊಗದ 'ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ' ಯೋಜನೆಯ ರಾಷ್ಟ್ರೀಯ ಕಾರ್ಯಗಾರ (ದಿನಾಂಕ: 24–06–2017 ರಿಂದ 25–06–2017) ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗೆ ಅಗತ್ಯವಿರುವ ಅಂಶಗಳನ್ನು ಸಮೀಕ್ಷೆ ಮೂಲಕ ತಿಳಿಯುವುದು ಮತ್ತು ಬದಲಾವಣೆಗೆ ಅಗತ್ಯವಿರುವ ಅಂಶಗಳನ್ನು ಅರಿತು ಕಾರ್ಯನಿರ್ವಹಿಸಲೆಂದೇ ಇರುವ **ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ, ಬೆಂಗಳೂರಿನಲ್ಲಿ** ಜರುಗಿದ ಕೃಷಿ ಬೆಲೆ ಆಯೋಗದ **'ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ'** ಯೋಜನೆಯ ಆಯ್ದ 25 ರೈತರು **ರಾಷ್ಟ್ರೀಯ ಕಾರ್ಯಗಾರದಲ್ಲಿ** ಭಾಗಿಯಾಗಿದ್ದರು.





ದಿನಾಂಕ 29,30 & 31–01–2018 ರಂದು ಕರ್ನಾಟಕ ಕೃಷಿ ಬೆಲೆ ಆಯೋಗ ಮತ್ತು **ಕಸ್ತೂರಭಾ ವೈದ್ಯಕೀಯ ಮಹಾವಿದ್ಯಾಲಯ ಮಣಿಪಾಲ ಸಹಯೋಗದೊಂದಿಗೆ ಏರ್ಪಡಿಸಿದ್ದ ರೈತರ ವ್ಯಕ್ತಿತ್ವ ವಿಕಸನ ಶಿಬಿರದಲ್ಲಿ** ತೆಲ್ಲೂರ ಗ್ರಾಮದ 25 ಫಲಾನುಭವಿ ರೈತರು ತರಬೇತಿಯಲ್ಲಿ ಭಾಗವಹಿಸಿದ್ದರು. ಮರುದಿನ ದರೆಗುಡ್ಡೆ ಎನ್ನುವ ಹಳ್ಳಿಯ ಪ್ರಗತಿಪರ ರೈತನ ಹೊಲಕ್ಕೆ ಭೇಟಿ ನೀಡಿದ್ದರು.





**ದಿನಾಂಕ** 02–03–2018 ರಿಂದ 03–03–2018 **ರಂದು ಕೇಂದ್ರೀಯ ವಿಶ್ವವಿದ್ಯಾಲಯ ಕಡಗಂಚಿ, ಕಲಬುರಗಿ**ಯಲ್ಲಿ ನೈರ್ಮಲ್ಯ ಮತ್ತು ಗ್ರಾಮೀಣ ಅಭಿವೃದ್ಧಿ ಕಾರ್ಯಗಾರವನ್ನು **ಅಳಂದ ಮತಕ್ಷೇತ್ರದ ಶಾಸಕರಾದ ಸನ್ಮಾನ್ಯ ಶ್ರೀ. ಬಿ.ಆರ್.ಪಾಟೀಲ ಉದ್ಘಾಟಿಸಿದರು.** ಈ ಕಾರ್ಯಕ್ರಮದಲ್ಲಿ ಕೇಂದ್ರಿಯ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಮಹೇಶ್ವರಯ್ಯ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿಸ್ತರಣಾ ನಿರ್ದೇಶಕರಾದ ಡಾ. ಎಸ್.ಕೆ.ಮೇಟಿ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಕಾರ್ಯಗಾರದ ಅಧ್ಯಕ್ಷತೆಯನ್ನು **ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷರಾದ ಡಾ. ಟಿ.ಎನ್.ಪ್ರಕಾಶ್ ಕಮ್ಮರಡಿ ಅವರು ವಹಿಸಿದ್ದರು.** ಈ ಕಾರ್ಯಕ್ರಮಕ್ಕೆ ತೆಲ್ಲೂರಿನ 37 ರೈತರು ಭಾಗಿಯಾಗಿದ್ದರು.

ಕೃಷಿ ವಿಜ್ಞಾನ ಕೇಂದ್ರ ಕಲಬುರಗಿ ಹಾಗೂ ಕೇಂದ್ರೀಯ ವಿಶ್ವವಿದ್ಯಾಲಯ ಕಡಗಂಚಿಯ ಸಹಭಾಗಿತ್ವದಲ್ಲಿ 8 ಕೃಷಿ ವಿಜ್ಞಾನ ಕೇಂದ್ರಗಳಿಂದ ಬಂದಂತಹ ರೈತರು, ರೈತ ಮಹಿಳೆಯರು, ವಿಜ್ಞಾನಿಗಳು ಹಾಗೂ ಕರ್ನಾಟಕ ಕೃಷಿ ಬೆಲೆ ಆಯೋಗದ ಸಿಬ್ಬಂದಿಯವರು ಈ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ದಿನಾಂಕ: 08 & 09–06–2018 ರಂದು **ಕೃಷಿ ವಿಜ್ಞಾನ ಕೇಂದ್ರ ಹಿರಿಯೂರು, ಚಿತ್ರದುರ್ಗ ಜಿಲ್ಲೆಯಲ್ಲಿ ರೈತರ ಆದಾಯ ಮತ್ತು ಕಲ್ಯಾಣ ಅಭಿವೃದ್ಧಿ ಯೋಜನೆಯ ಕಾರ್ಯಾಗಾರವ**ನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಾಗಾರದಲ್ಲಿ ಯೋಜನೆಯ ಪ್ರಗತಿ ಹಾಗೂ ಮುಂದೆ ಮಾಡುವಂತಹ ಕಾರ್ಯಗಳ ಬಗ್ಗೆ ಚರ್ಚಿಸಲಾಯಿತು.

ದಿನಾಂಕ: 26 & 27–07–2018 ರಂದು **ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರಿನಲ್ಲಿ** ನಡೆದ ರಾಜ್ಯ ಮಟ್ಟದ ಕಾರ್ಯಾಗಾರದಲ್ಲಿ ತೆಲ್ಲೂರಿನ ರೈತರು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡರು. ಈ ಕಾರ್ಯಾಗಾರದಲ್ಲಿ ರೈತರು ಬೆಳೆದಂತಹ ಬೆಳೆಗಳಿಗೆ ಬೆಂಬಲ ಬೆಲೆ ನೀಡುವುದರ ಬಗ್ಗೆ ಅರಿವು ಮೂಡಿಸಲಾಯಿತು.

**ಗ್ರಾಮ ಸಭೆ ಹಾಗೂ ತರಬೇತಿಗಳ ವಿವರ:**





ದಿನಾಂಕ: 31–07–2017 ರಂದು **ತೋಟಗಾರಿಕೆ ಇಲಾಖೆ, ಆಳಂದ (ತಾಲೂಕ) ಸಹಾಯಕ ನಿರ್ದೇಶಕರಾದ ಶ್ರೀ ಸಕಲೇಶ ಪಾಟೀಲ್ ರವರು** ತೋಟಗಾರಿಕೆ ಇಲಾಖೆಯಿಂದ ರೈತರಿಗೆ ಸಿಗುವ ಸೌಲಭ್ಯಗಳ ಬಗ್ಗೆ ಮನವರಿಕೆ ಮಾಡಿಕೊಡಲಾಯಿತು. ಕೆವಿಕೆ ಕಲಬುರಗಿಯ ಮುಖ್ಯಸ್ಥರಾದ ಡಾ. ರಾಜು ಜಿ. ತೆಗ್ಗೆಳ್ಳಿ ಯವರು ತರಕಾರಿ ಮತ್ತು ಹಣ್ಣಿನ ಬೆಳೆಗಳಲ್ಲಿ ಕೀಟ ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು.



ದಿನಾಂಕ: 04–06–2017 ರಂದು ಕೃಷಿ ವಿಜ್ಞಾನ ಕೇಂದ್ರ ಕಲಬುರಗಿಯಲ್ಲಿ **ಮುಂಗಾರು ಹಂಗಾಮಿನ ಬೆಳೆಗಳಾದ** ತೊಗರಿ, ಹೆಸರು, ಉದ್ದು ಮತ್ತು ಸೋಯಾ ಅವರೆ ಬಗ್ಗೆ ತರಬೇತಿ ನೀಡಲಾಯಿತು.





ದಿನಾಂಕ: 16–08–2017 ರಂದು **ಪ್ಲಸ್ ಟ್ರಸ್ಟ ಅಧ್ಯಕ್ಷರಾದ ಡಾ. ಪ್ರಭಾಕರ್ ಶೆಟ್ಟಿ ರವರಿಂದ** ಸಮಗ್ರ ಕೃಷಿ ಪದ್ಧತಿಯ ಮಾದರಿ (IFS Models) ಬಗ್ಗೆ ರೈತರೊಡನೆ ಚರ್ಚೆ ನಡೆಸಿ, ಸಮಗ್ರ ಮಾಹಿತಿ ನೀಡಲಾಯಿತು. ಇದರಲ್ಲಿ ಆಯ್ದ 25 ರೈತರ ಅವರ ಹೊಲಗಳ ಸಮೀಕ್ಷೆಯ ಆಧಾರದ ಮೇಲೆ ಸಮಗ್ರ ಕೃಷಿ ಪದ್ಧತಿಗೆ ಬೇಕಾದಂತಹ ಪರಿಕರಗಳ ಬಗ್ಗೆ ಮಾಹಿತಿ ನೀಡಲಾಯಿತು.

## ತೆಲ್ಲೂರ ಗ್ರಾಮ ರೈತರ ಸಾಮಾನ್ಯ ಮಾಹಿತಿ, ಜಿಲ್ಲಾ ಕಲಬುರಗಿ

| ಕ್ರ. ಸಂ. | ರೈತರ ಹೆಸರು | ವಿಸ್ತೀರ್ಣ (ಎಕರೆಗಳಲ್ಲಿ) | ನೀರಾವರಿ | ಆಕಳುಗಳು | | ಎಮ್ಮೆ | ಕುರಿ/ಆಡು | ಕೊಟ್ಟಿಗೆ (ಚದರ ಅಡಿ) | ಮೇವು (ಎಕರೆಗಳಲ್ಲಿ) | ಒಟ್ಟು ಆದಾಯ |
|---|---|---|---|---|---|---|---|---|---|---|
| | | | | ಸಿಬಿ | ಸ್ಥಳೀಯ) | | | | | |
| 1 | ವೀರಣ್ಣ | 07 | 03 | | 01 | 02 | – | – | – | 72000 |
| 2 | ಮಲ್ಲಿಕಾರ್ಜುನ್ ಎಸ್ | 03 | – | – | – | – | 04(ಆಡು) | – | – | 26000 |
| 3 | ಲಿಂಗರಾಜ್ | 40 | 22 | 01 | 01 | 01 | – | – | 01 | 332100 |
| 4 | ಮಲ್ಲಿಕಾರ್ಜುನ್ | 03 | – | – | 04 | – | 20 (ಆಡು) | 1000 | – | 10000 |
| 5 | ಶರಣಬಸಪ್ಪಾ | 15 | 15 | 02 | 01 | – | – | – | 0.02 | 69650 |
| 6 | ಶಿವಲಿಂಗಪ್ಪಾ | 16 | 14 | – | 02 | 04 | – | – | 02 | 432100 |
| 7 | ಮಲ್ಲಿಕಾರ್ಜುನ ಬಿ | 04 | 0.02 | – | 02 | – | – | – | – | 53800 |
| 8 | ನಾಗರಾಜ | 24 | 06 | 01 | 01 | 01 | – | 2000 | – | 198300 |
| 9 | ಪ್ರಭುಲಿಂಗ | 05 | 03 | – | – | – | – | – | – | 84600 |
| 10 | ಬಂದಗಿಸಾಬ | 03 | 03 | – | 01 | – | – | – | – | 24800 |
| 11 | ಸಂತೋಷ | 10 | – | – | – | 01 | – | 20 | – | 178000 |
| 12 | ಮಲ್ಲಯ್ಯ | 15+10 ಗೇಣಿ | 05 | 02 | 03 | 04 | – | – | – | 676300 |
| 13 | ಚನ್ನಪ್ಪಾ | 16 | 04 | 02 | 01 | 01 | – | 300 | – | 129400 |
| 14 | ರಾಜಶೇಖರ | 04 | – | – | – | – | – | – | – | 70900 |
| 15 | ಶಿವಶರಣಪ್ಪಾ | 08 | 04 | – | – | – | – | – | – | 26500 |
| 16 | ಜಯದ್ರಥಾ | 06 | – | – | 02 | – | 05 (ಆಡು) | – | – | 129100 |
| 17 | ಶಿವಶರಣಪ್ಪಾ | 08 | – | – | 02 | – | – | – | – | 41800 |
| 18 | ಪರಮೇಶ್ವರ | 06 | – | – | 02 | – | – | – | – | 67700 |
| 19 | ಬೀಮರಾಮ | 04 | 04 | – | 02 | – | – | – | – | 177400 |
| 20 | ಗಿರಿಜಾಬಾಯಿ | 2.03 | 2.36 | – | – | – | 15(ಆಡು) | – | – | 14900 |
| 21 | ಶಾಂತಪ್ಪಾ | 1.21 | 1.21 | – | – | – | – | – | – | 22000 |
| 22 | ಶಂಕರ | 14 | 03 | – | 02 | 01 | 02(ಆಡು) | 100 | 01 | 204350 |
| 23 | ವಿಠಲ | 12 | 01 | 02 | 02 | – | – | – | 01 | 272100 |
| 24 | ಶರಣಗೌಡ | 4.18 | 0.18 | – | 06 | 01 | – | – | – | 46300 |
| 25 | ವಿಜಯಕುಮಾರ | 9.02 | 1.02 | – | 03 | – | – | – | – | 284700 |

**ಸಮಗ್ರ ಕೃಷಿ ಪದ್ಧತಿ–ಮಾದರಿಯ ಯೋಜನೆಯನ್ನು ಅನುಷ್ಠಾನಗೊಳಿಸಲು ವಿವಿಧ ರೈತರ ಅವಶ್ಯಕತೆಯ ಘಟಕಗಳು–ತೆಲ್ಲೂರ ಗ್ರಾಮ ಆಳಂದ ತಾಲೂಕಾ, ಜಿಲ್ಲಾ ಕಲಬುರಗಿ.**

| ಕ್ರ. ಸಂ. | ಹೆಸರು | ಸಣ್ಣ ಟ್ಯಾಕ್ಟರ್ | ಮಲ್ಟಿ ಕ್ರಾಪ್ ಥ್ರೇಸರ್ | ಕುಡಿ ಚಿವುಟುವ ಯಂತ್ರ | ರೋಟೋವೇಟರ್ | ಹನಿ ನೀರಾವರಿ | ತುಂತುರು ನೀರಾವರಿ | ಕೃಷಿ ಹೊಂಡ | ಬೋರ್ ವೆಲ್ ರಿಚಾರ್ಜ ಯುನಿಟ್ | ಬಾರ್ಡರ ಟ್ರೀ ಪ್ಲಾಂಟಿಂಗ್ | ಎರೆಹುಳು ಗೊಬ್ಬರ | ಮಿಶ್ರತಳಿ ಆಕಳು | ಎಮ್ಮೆ | ಕುರಿ |
|---|---|---|---|---|---|---|---|---|---|---|---|---|---|---|
| 1 | ವೀರಣ್ಣ | | ಹೌದು | ಹೌದು | | | | ಹೌದು | | ಹೌದು | ಹೌದು | 2 | | 10+1 |
| 2 | ಮಲ್ಲಿಕಾರ್ಜುನ್ ಎಸ್ | | | ಹೌದು | | | | ಹೌದು | | ಹೌದು | ಹೌದು | 2 | | |
| 3 | ಲಿಂಗರಾಜ್ | ಹೌದು | ಹೌದು | | | | ಹೌದು | ಹೌದು | | ಹೌದು | ಹೌದು | | | |
| 4 | ಮಲ್ಲಿಕಾರ್ಜುನ್ | | | | | | | ಹೌದು | | ಹೌದು | ಹೌದು | 2 | | 5+4 |
| 5 | ಶರಣಬಸಪ್ಪಾ | | | | | ಹೌದು | | ಹೌದು | | ಹೌದು | ಹೌದು | 1+4 | | 10+1 |
| 6 | ಶಿವಲಿಂಗಪ್ಪಾ | ಹೌದು | | | | ಹೌದು | | ಹೌದು | | ಹೌದು | ಹೌದು | 1+2 | 1+1 | 10+1 |
| 7 | ಮಲ್ಲಿಕಾರ್ಜುನ್ ಬಿ | | | | | | | ಹೌದು | | ಹೌದು | ಹೌದು | 2+2 | | 10+1 |
| 8 | ನಾಗರಾಜ | ಹೌದು | ಹೌದು | | | | | ಹೌದು | | ಹೌದು | ಹೌದು | 1+2 | 2 | 10+1 |
| 9 | ಪ್ರಭುಲಿಂಗ | | | | | ಹೌದು | | ಹೌದು | | ಹೌದು | ಹೌದು | 2 | | 10+1 |
| 10 | ಬಂದಗಿಸಾಬ | | | | | | | ಹೌದು | | ಹೌದು | ಹೌದು | | 2 | 10+1 |
| 11 | ಸಂತೋಷ | | | | | | | ಹೌದು | | ಹೌದು | ಹೌದು | 1 | 1 | 10+1 |
| 12 | ಮಲ್ಲಯ್ಯ | | | | | ಹೌದು | | ಹೌದು | | ಹೌದು | ಹೌದು | 2 | 2 | |
| 13 | ಚನ್ನಪ್ಪಾ | | | | | ಹೌದು | | ಹೌದು | | ಹೌದು | ಹೌದು | | 2 | 10+1 |
| 14 | ರಾಜಶೇಖರ | | | | | | | ಹೌದು | | ಹೌದು | ಹೌದು | | | 20+2 |
| 15 | ಶಿವಶರಣಪ್ಪಾ | ಹೌದು | | | | ಹೌದು | | ಹೌದು | | ಹೌದು | ಹೌದು | 2 | | 10+1 |
| 16 | ಜಯದ್ರಥಾ | | ಹೌದು | | | | | ಹೌದು | | ಹೌದು | ಹೌದು | 2+2 | | 10+1 |
| 17 | ಶಿವಶರಣಪ್ಪಾ | ಹೌದು | | | | | | ಹೌದು | | ಹೌದು | ಹೌದು | 2+2 | 2 | |
| 18 | ಪರಮೇಶ್ವರ | ಹೌದು | ಹೌದು | | | | | ಹೌದು | | ಹೌದು | ಹೌದು | 2+2 | | 10+1 |
| 19 | ಭೀಮರಾಮ | ಹೌದು | | | ಹೌದು | ಹೌದು | | ಹೌದು | | ಹೌದು | ಹೌದು | 2 | | 10+1 |
| 20 | ಗಿರಿಜಾಬಾಯಿ | | | | | ಹೌದು | | ಹೌದು | ಹೌದು | ಹೌದು | ಹೌದು | 2 | | 100+5 |
| 21 | ಶಾಂತಪ್ಪಾ | | ಹೌದು | | | | | ಹೌದು | | ಹೌದು | ಹೌದು | 2 | 2 | 10+1 |
| 22 | ಶಂಕರ | ಹೌದು | | ಹೌದು | | ಹೌದು | | ಹೌದು | | ಹೌದು | ಹೌದು | 2+2 | | 20+2 |
| 23 | ವಿಠಲ | ಹೌದು | ಹೌದು | | | | | ಹೌದು | | ಹೌದು | ಹೌದು | 2+2 | | |
| 24 | ಶರಣಗೌಡ | ಹೌದು | ಹೌದು | | | | | ಹೌದು | | ಹೌದು | ಹೌದು | 6+4 | 5 | 30+3 |

| | | | | | | | | | | | | | | |
|---|---|---|---|---|---|---|---|---|---|---|---|---|---|---|
| 25 | ವಿಜಯಕುಮಾರ | | | ಹೌದು | | | | ಹೌದು | | ಹೌದು | ಹೌದು | 3+3 | | 10+1 |
| ಒಟ್ಟು | | 10 | 8 | 4 | 1 | 9 ಯುನಿಟ್ | 1 ಯುನಿಟ್ | 25 ಯುನಿಟ್ | 1 ಯುನಿಟ್ | 25 ಯುನಿಟ್ | 25 ಯುನಿಟ್ | 20 ಯುನಿಟ್ | 9 ಯುನಿಟ್ | 20 ಯುನಿಟ್ |



ದಿನಾಂಕ: 18–06–2019 ರಂದು ತೆಲ್ಲೂರಿನ 25 ರೈತರಿಗೆ **ಮಣ್ಣು ಆರೋಗ್ಯ ಕಾರ್ಡ್** ವಿತರಣೆ ಮಾಡಲಾಯಿತು.





ದಿನಾಂಕ : 13–12–2017 ರಂದು **ಗ್ರಾಮಸಭೆ**ಯನ್ನು ನಡೆಸಲಾಯಿತು. ಕೆವಿಕೆಯ ಗೃಹ ವಿಜ್ಞಾನಿಯಾದ ಶ್ರೀ ದೀಪಕ್, ಕ್ಷೇತ್ರ ವ್ಯವಸ್ಥಾಪಕರಾದ ಶ್ರೀ ಭೀಮರಾಯ, ಕೆಎಪಿಸಿಯ ಸಂಶೋಧನಾ ಸಹಾಯಕರಾದ ಶ್ರೀ ಪುನೀತ್ ಪಾಟೀಲ್ ಮತ್ತು ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಮಲ್ಲಿನಾಥ ಹೆಮಾಡಿ ರವರು ಭಾಗವಹಿಸಿದ್ದರು. ಈ ಸಭೆಯಲ್ಲಿ ತೃಣಧಾನ್ಯಗಳ ಮೌಲ್ಯವರ್ಧನೆ ಹಾಗೂ ಮಾರುಕಟ್ಟೆಯ ಬಗ್ಗೆ ಗೃಹ ವಿಜ್ಞಾನಿಗಳು ತಿಳಿಸಿದರು. ಇದಲ್ಲದೇ, ಸಂಪನ್ಮೂಲ ವ್ಯಕ್ತಿಗಳು ಕಡಲೆ ಮತ್ತು ತೊಗರಿಯಲ್ಲಿ ಸಮಗ್ರ ಕೀಡೆ ನಿರ್ವಹಣೆ ಬಗ್ಗೆ ತಿಳಿಸಿದರು.





ದಿನಾಂಕ: 26–02–2018 ರಂದು **ಮನೋಶಾಸ್ತ್ರ ವಿಜ್ಞಾನಿಯಾದ ಡಾ. ಆರ್.ವಿ. ಪಾಟೀಲ್** ರವರು ತೆಲ್ಲೂರ ರೈತರಿಗೆ **ಸಕಾರಾತ್ಮಕ ಮನೋಭಾವನೆ, ಆತ್ಮವಿಶ್ವಾಸ ಹಾಗೂ ಅಚಲವಾದ ದೃಢ ನಿರ್ಧಾರವನ್ನು** ಕೃಷಿಯಲ್ಲಿ ಅಳವಡಿಸಿಕೊಂಡರೆ, ಆತ್ಮಹತ್ಯೆಯನ್ನು ತಡೆಯಬಹುದು ಎಂದು ತಿಳಿಸಿದರು. ಮನೋಭಾವನೆ ಕೆವಿಕೆಯ ಮುಖ್ಯಸ್ಥರಾದ ಡಾ. ರಾಜು. ಜಿ. ತೆಗ್ಗೆಳ್ಳಿ ರವರು ತೊಗರಿ ಹಾಗೂ ಕಡಲೆಯನ್ನು ಆನ್‌ಲೈನ್ ಮಾರುಕಟ್ಟೆಯಲ್ಲಿ ಹೇಗೆ ಮಾರಾಟ ಮಾಡಬೇಕೆಂದು ತಿಳಿಸಿದರು.




ದಿನಾಂಕ: 24–03–2018 ರಂದು ತೆಲ್ಲೂರಿನಲ್ಲಿ **ರೇಷ್ಮೆ ಇಲಾಖೆಯ ಉಪ ನಿರ್ದೇಶಕರಾದ ಶ್ರೀ ಜಿ.ವಿ. ಉಪ್ಪಾರ್ ರವರು ಕೃಷಿಯಲ್ಲಿ ರೇಷ್ಮೆ ಬೆಳೆಯನ್ನು ಅಳವಡಿಸಿಕೊಂಡರೆ,** ರೈತರಿಗೆ ಆದಾಯ ದ್ವಿಗುಣವಾಗುವುದು ಎಂಬುದರ ಬಗ್ಗೆ ತಿಳಿಸಿದರು. ಸಹಾಯಕ ನಿರ್ದೇಶಕರಾದ ಶ್ರೀ ನಹೀಮ್ ಚೌದರಿ ಯವರು ರೇಷ್ಮೆ ಬೆಳೆಯಲ್ಲಿ ಪ್ರಗತಿ ಹೊಂದಿದ ರೈತರ ಯಶೋಗಾಥೆಗಳಬಗ್ಗೆ ವಿವರಿಸಿದರು. ತೆಲ್ಲೂರ ಪ್ರಾಂತ್ಯದ ಅಧಿಕಾರಿಯಾದ ಶ್ರೀ ಎಸ್.ಕೆ. ಹೊಸಮನಿ ಯವರು ಹಿಪ್ಪು ನೇರಳೆಯ ಬೆಳೆಯ ಬಗ್ಗೆ ಸವಿವರವಾಗಿ ತಿಳಿಸಿದರು.




ದಿನಾಂಕ: 17–07–2018 ರಂದು ಕೆವಿಕೆ ಕಲಬುರಗಿಯಲ್ಲಿ ತೆಲ್ಲೂರ ರೈತರು ಪ್ರಸ್ತುತ ಸನ್ನಿವೇಶದಲ್ಲಿ ಕೃಷಿಯಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ನಿವಾರಣೆ ಬಗ್ಗೆ ಚರ್ಚೆಯನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ **ಕರ್ನಾಟಕ ಸರ್ಕಾರದ ಕೃಷಿ ಸಚಿವರಾದ ಸನ್ಮಾನ್ಯ ಶ್ರೀ ಶಿವಶಂಕರ್ ರೆಡ್ಡಿ, ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ. ಪ್ರಿಯಾಂಕ ಖರ್ಗೆ, ಕೃವಿವಿ, ರಾಯಚೂರಿನ ಕುಲಪತಿಗಳಾದ ಶ್ರೀ. ಗುತ್ತಿ ಜಂಬುನಾಥ ಹಾಗೂ ಕೆವಿಕೆಯ ಮುಖ್ಯಸ್ಥರಾದ ಡಾ. ರಾಜು ಜಿ. ತೆಗ್ಗೆಳ್ಳಿ ರವರು ಭಾಗವಹಿಸಿ,** ರೈತರ ಸಮಸ್ಯೆಗಳಿಗೆ ಪರಿಹಾರ ಸೂಚಿಸಿದರು. ಇದಲ್ಲದೇ, ತೊಗರಿಯಲ್ಲಿ ಆಳುಗಳ ಸಮಸ್ಯೆ ನಿವಾರಣೆಗಾಗಿ ನವೀನ ಉಪಕರಣಗಳನ್ನು ಬಳಸಿಕೊಂಡು, ಖರ್ಚನ್ನು ಕಡಿಮೆ ಮಾಡುವುದರ ಬಗ್ಗೆ ತಿಳಿಸಿದರು.




ದಿನಾಂಕ: 05–10–2018 ರಂದು ಸುಮಾರು 45 ತೆಲ್ಲೂರ ರೈತರಿಗೆ ಕಡಲೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು. **ಕೆವಿಕೆಯ ಮುಖ್ಯಸ್ಥರಾದ ಡಾ. ರಾಜು ಜಿ. ತೆಗ್ಗೆಳ್ಳಿ ರವರು ಕಡಲೆಯ ಹೊಸ ತಳಿಯಾದ BGD-103 ಬಗ್ಗೆ ತಿಳಿಸಿದರು.** ಈ ಸಂದರ್ಭದಲ್ಲಿ ಒಬ್ಬೊಬ್ಬ ರೈತನಿಗೆ 20 ಕೆ.ಜಿಯಷ್ಟು BGD-103 ಕಡಲೆ ಬೀಜವನ್ನು 45 ರೈತರಿಗೆ ವಿತರಿಸಲಾಯಿತು.






ದಿನಾಂಕ: 31–12–2018 ರಂದು ತೆಲ್ಲೂರಿನ ರೈತರಿಗೆ **ಕೃಷಿಯಲ್ಲಿ ಎರೆಗೊಬ್ಬರದ ಮಹತ್ವ** ಬಗ್ಗೆ ತರಬೇತಿ ನೀಡಲಾಯಿತು. ಈ ಸಂದರ್ಭದಲ್ಲಿ ಎರೆಹುಳು ಗೊಬ್ಬರದ ಘಟಕ ತಯಾರು ಮಾಡಲು ಎರೆಗೊಬ್ಬರದ ಪ್ಲಾಸ್ಟಿಕ್ ತಾಡಪತ್ರೆಗಳನ್ನು 5 ರೈತರಿಗೆ ನೀಡಲಾಯಿತು. ಒಬ್ಬೊಬ್ಬ ರೈತನಿಗೆ 2 ಪ್ಲಾಸ್ಟಿಕ್ ತಾಡಪತ್ರೆಗಳನ್ನು ವಿತರಣೆ ಮಾಡಲಾಯಿತು. ದಿನಾಂಕ: 15–02–2019 ರಂದು ಎರೆಹುಳು ಗೊಬ್ಬರದ ಘಟಕದ ಪದ್ಧತಿ ಪ್ರಾತ್ಯಕ್ಷಿಕೆಯನ್ನು ತೆಲ್ಲೂರ ಗ್ರಾಮದಲ್ಲಿ ಕೆಎಪಿಸಿ ಸಿಬ್ಬಂದಿಯವರು ತೋರಿಸಿದರು.





ದಿನಾಂಕ: 05-06-2018 ರಂದು **ವಿಶ್ವ ಪರಿಸರ ದಿನಾಚರಣೆಯ** ಅಂಗವಾಗಿ ಮುಂಗಾರು-ಹಂಗಾಮಿನ ತರಬೇತಿಯನ್ನು ಕೆವಿಕೆಯ ಮುಖ್ಯಸ್ಥರಾದ ಡಾ. ರಾಜು ಜಿ. ತೆಗ್ಗೆಳ್ಳಿ ಹಾಗೂ ಪ್ರಾಣಿ ವಿಜ್ಞಾನಿಯಾದ ಡಾ. ಮಂಜುನಾಥ ಪಾಟೀಲ್ ರವರು ನಡೆಸಿಕೊಟ್ಟರು. ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಿ, ಸಾವಯವ ಕೃಷಿಯನ್ನು ಮಾಡುವುದು ಹಾಗೂ ವೈಜ್ಞಾನಿಕ ಪಶುಸಂಗೋಪನೆ ಬಗ್ಗೆ ತಿಳಿಸಿಕೊಟ್ಟರು.



**ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ, ಆಳಂದ ಶ್ರೀ ಅಪ್ಪಾಸಾಹೇಬ ಜಗಶೆಟ್ಟಿ ರವರು** 2018-19 ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರದಿಂದ ಕೃಷಿ ಇಲಾಖೆಯಲ್ಲಿ ದೊರೆಯುವ ಸೌಲಭ್ಯಗಳ ಬಗ್ಗೆ ಸಮಗ್ರವಾಗಿ ಮಾಹಿತಿ ನೀಡಲಾಯಿತು.



**ಪಂಚಾಯತ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯತ ದಣ್ಣೂರ ಶ್ರೀಮತಿ ನೀಲಾ ಕೆ.** ರವರು ಸುಮಾರು 100 ತೆಲ್ಲೂರ ಗ್ರಾಮಸ್ಥರಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಗ್ರಾಮೀಣ ಯೋಜನೆ ಬಗ್ಗೆ ತರಬೇತಿ ನೀಡಲಾಯಿತು. ಈ ತರಬೇತಿಯಲ್ಲಿ ಉದ್ಯೋಗ ಕಾರ್ಡ್, ಕೃಷಿ ಹೊಂಡ ತೋಡುವುದರ ಬಗ್ಗೆ ತಿಳಿಸಿದರು.





ದಿನಾಂಕ: 03–09–2018 ರಂದು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ರಾಜು ಜಿ. ತೆಗ್ಗೆಳ್ಳಿ ಅವರ ಸಮ್ಮುಖದಲ್ಲಿ **ಪಾರ್ಥೇನಿಯಂ ನಿರ್ಮೂಲನಾ ದಿನಾಚರಣೆ**ಯನ್ನು ಪ್ರಾಥಮಿಕ ಶಾಲೆ ತೆಲ್ಲೂರಿನಲ್ಲಿ ಆಚರಿಸಲಾಯಿತು. ಸುಮಾರು 125 ತೆಲ್ಲೂರ ರೈತರು, ವಿದ್ಯಾರ್ಥಿಗಳು ಈ ದಿನಾಚರಣೆಯ ಸದುಪಯೋಗ ಪಡೆದುಕೊಂಡರು. ಪಾರ್ಥೇನಿಯಂ ಕಳೆಯನ್ನು ಹೊಲದಲ್ಲಿ ಸಂಪೂರ್ಣವಾಗಿ ಹೇಗೆ ನಿರ್ಮೂಲನೆ ಮಾಡಬೇಕೆಮಬುದರ ಬಗ್ಗೆ ಕೆವಿಕೆಯ ಮುಖ್ಯಸ್ಥರು ತಿಳಿಸಿಕೊಟ್ಟರು.







ದಿನಾಂಕ: 15–03–2018 ರಂದು ಸಮಾಜ ವಿಜ್ಞಾನ ವಿಭಾಗ, **ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ ಪ್ರಾಧ್ಯಾಪಕರು, ವಿವಿಧ ರಾಜ್ಯದ ಪ್ರಾಧ್ಯಾಪಕರು ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು** ತೆಲ್ಲೂರ ಗ್ರಾಮಕ್ಕೆ ಭೇಟಿ ನೀಡಿದ್ದರು. ಈ ಭೇಟಿಯಲ್ಲಿ ತೆಲ್ಲೂರ ರೈತರೊಂದಿಗೆ ಹವಾಮಾನ, ವಿವಿಧ ಮುಂಗಾರು–ಹಿಂಗಾರು ಬೆಳೆಗಳು ಹಾಗೂ ಬೆಂಬಲ ಬೆಲೆಯ ಬಗ್ಗೆ ಚರ್ಚಿಸಿದರು.



ದಿನಾಂಕ: 17–07–2018 ರಂದು **ಭಾರತದ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ರವರ ರೈತರೊಂದಿಗೆ ಚರ್ಚಾ ಗೋಷ್ಠಿಯ ನೇರ ಪ್ರಸಾರವನ್ನು** ತೆಲ್ಲೂರ ರೈತರಿಗೆ ಕೆವಿಕೆಯಲ್ಲಿ ಆಯೋಜಿಸಲಾಯಿತು. ಈ ನೇರ ಪ್ರಸಾರದಿಂದ ರೈತರು ಸಮಗ್ರ ಕೃಷಿ ಪದ್ಧತಿ, ಜೇನು ಸಾಕಾಣಿಕೆ ಹಾಗೂ ಮೀನು ಸಾಕಾಣಿಕೆಯ ಬಗ್ಗೆ ಮಾಹಿತಿಯನ್ನು ತಿಳಿದುಕೊಂಡರು.





ದಿನಾಂಕ: 18–06–2019 ರಂದು ಕೆವಿಕೆಯ ಬೇಸಾಯಶಾಸ್ತ್ರ ವಿಜ್ಞಾನಿಯಾದ ಡಾ. ಯೂಸುಫ್ ಅಲಿ ಮುಂಗಾರು–ಹಂಗಾಮಿನ ಬೆಳೆಗಳಾದ ತೊಗರಿ, ಉದ್ದು, ಹೆಸರು ಮತ್ತು ಸೋಯಾಅವರೆ ಬಗ್ಗೆ ರೈತರಿಗೆ ಮಾಹಿತಿ ನೀಡಿದರು. ಇದಲ್ಲದೇ, **ತೊಗರಿ ಬೀಜದ ಬೀಜೋಪಚಾರವನ್ನು ಪದ್ಧತಿ ಪ್ರಾತ್ಯಕ್ಷಿಕೆ** ಮೂಲಕ ತೋರಿಸಿಕೊಟ್ಟರು. ಇನ್ನೋರ್ವ ಪ್ರಾಣಿ ವಿಜ್ಞಾನಿಯಾದ ಡಾ. ಮಂಜುನಾಥ ಪಾಟೀಲ್ ರವರು ಸಮಗ್ರ ಕೃಷಿ ಪದ್ಧತಿಯಲ್ಲಿ ವೈಜ್ಞಾನಿಕ ಪಶುಸಂಗೋಪನೆ ಬಗ್ಗೆ ಮಾತನಾಡಿದರು. ಈ ತರಬೇತಿಯಲ್ಲಿ ಸುಮಾರು 70 ರೈತರು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡರು.





ದಿನಾಂಕ: 03–07–2019 ರಂದು ತೆಲ್ಲೂರ ಗ್ರಾಮದಲ್ಲಿ **ಹತ್ತಿ ಬೆಳೆಯ ಸಮಗ್ರ ನಿರ್ವಹಣೆ ತರಬೇತಿ**ಯನ್ನು ಮಾಡಲಾಯಿತು. ಈ ತರಬೇತಿಯಲ್ಲಿ ಕೆವಿಕೆಯ ಮುಖ್ಯಸ್ಥರಾದ ಡಾ. ರಾಜು ಜಿ. ತೆಗ್ಗೆಳ್ಳಿ, ರೋಗಶಾಸ್ತ್ರದ ವಿಜ್ಞಾನಿಯಾದ ಡಾ. ಜಹೀರ್ ಅಹ್ಮದ್ ಮತ್ತು ಕೆಎಪಿಸಿಯ ಕ್ಷೇತ್ರ ಸಹಾಯಕರಾದ ಕೆ. ಆನಂದಮ್ಮ ರವರು ಭಾಗವಹಿಸಿದ್ದರು. ಈ ಪ್ರಸ್ತುತ ಸಂದರ್ಭದಲ್ಲಿ ಡಾ. ರಾಜು ಜಿ. ತೆಗ್ಗೆಳ್ಳಿ ಯವರು ಹತ್ತಿ ಬೆಳೆಯಲ್ಲಿ ಬರುವ ರಸಹೀರುವ ಕೀಟಗಳು ಮತ್ತು ಗುಲಾಬಿ ಕಾಯಿಕೊರಕಗಳ ಹಾನಿ ಮತ್ತು ಇವುಗಳ ನಿರ್ವಹಣೆ ಬಗ್ಗೆ ತಿಳಿಸಿಕೊಟ್ಟರು ಹಾಗೂ ಡಾ. ಜಹೀರ್ ಅಹ್ಮದ್ ರವರು ಹತ್ತಿಯಲ್ಲಿ ಬರುವ ರೋಗಗಳು ಅದರ ಹಾನಿಯ ಲಕ್ಷಣಗಳು ಮತ್ತು ನಿರ್ವಹಣೆಯ ಬಗ್ಗೆ ಮಾಹಿತಿಯನ್ನು ನೀಡಿದರು.

**ಪತ್ರಿಕಾ ಪ್ರಕಟಣೆಗಳು :**



ಪ್ರಜಾವಾಣಿ ಶನಿವಾರ, ಜುಲೈ 22, 2017

ಪ್ರಾಯೋಗಿಕ ಯೋಜನೆಗೆ ಜಿಲ್ಲೆಯ ಆಳಂದ ತಾಲ್ಲೂಕಿನ ತೆಲ್ಲೂರ ಗ್ರಾಮ ಆಯ್ಕೆ

# ರೈತರ ಆದಾಯ ದ್ವಿಗುಣಕ್ಕೆ ಕ್ರಮ: ಕಮ್ಮರಡಿ

ಮುಖ್ಯಾಂಶಗಳು

- ರೈತರ ಕಲ್ಯಾಣಕ್ಕೆ 52 ಯೋಜನೆ
- ಗೋದಾಮು ನಿರ್ಮಾಣಕ್ಕೆ ಕ್ರಮ
- ಸಾಲ ನೀಡಲು ಸೂಚನೆ

ಹೆಬ್ಬೇವು ಬೆಳೆಯಿರಿ

ಮಣ್ಣು, ರೈತರ ಆರೋಗ್ಯ ತಪಾಸಣೆ

**ದಿನಾಂಕ: 21–07–2017 ರಂದು ಕೃಷಿ ಬೆಲೆ ಆಯೋಗದ ಮಾನ್ಯ ಅಧ್ಯಕ್ಷರಾದ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ** ರವರ ಅಧ್ಯಕ್ಷತೆಯಲ್ಲಿ **ಜಿಲ್ಲಾಧಿಕಾರಿಗಳ ಕಛೇರಿ ಕಲಬುರಗಿಯಲ್ಲಿ** ಸರ್ಕಾರಿಯ ಎಲ್ಲಾ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆ ಸಭೆಯನ್ನು ಕೈಗೊಂಡ ಬಗ್ಗೆ ಪತ್ರಿಕಾ ಪ್ರಕಟಣೆ



ನಮ್ಮ ಕಲಬುರಗಿ

# ಗ್ರಾಮೀಣ ಸಮಸ್ಯೆ ಅನಾವರಣ



ವಿಜಯ ಕರ್ನಾಟಕ

# ದ್ವಿದಳ ಧಾನ್ಯಕ್ಕೆ ರಾಷ್ಟ್ರೀಯ ನೀತಿ ಅಗತ್ಯ: ಕಮ್ಮರಡಿ

**ದಿನಾಂಕ:** 02–03–2018 ರಿಂದ 03–03–2018 **ರಂದು ಕೇಂದ್ರೀಯ ವಿಶ್ವವಿದ್ಯಾಲಯ ಕಡಗಂಚಿ, ಕಲಬುರಗಿಯಲ್ಲಿ** ನೈರ್ಮಲ್ಯ ಮತ್ತು ಗ್ರಾಮೀಣ ಅಭಿವೃದ್ದಿ ಕಾರ್ಯಗಾರದ ಬಗ್ಗೆ ಪತ್ರಿಕಾ ಪ್ರಕಟಣೆ



ಆಳಂದ ತಾಲೂಕಿನ ತೆಲ್ಲೂರ ಗ್ರಾಮದಲ್ಲಿ ಕೃಷಿ ವಿಜ್ಞಾನ ಕೇಂದ್ರದಿಂದ ಆರೋಗ್ಯ ತಪಾಸಣೆ ಶಿಬಿರ

300ಕ್ಕೂ ಹೆಚ್ಚು ಜಾನುವಾರುಗಳಿಗೆ ಚಿಕಿತ್ಸೆ



'ಕಾಲು-ಬಾಯಿ' ನಿಯಂತ್ರಣ ಲಸಿಕೆ

ದಿನಾಂಕ : 25–10–2017 ಹಾಗೂ 13–06–2018 ರ **ಉಚಿತ ಪಶು ಆರೋಗ್ಯ ತಪಾಸಣಾ ಶಿಬಿರದ** ಪತ್ರಿಕಾ ಪ್ರಕಟಣೆ



ಕೃಷಿ ಮೌಲ್ಯ ವರ್ಧನೆಗೆ ಪ್ರಧಾನಿ ಕರೆ

ರೈತರೊಂದಿಗೆ ಪ್ರಧಾನಿ ಮೋದಿ ನೇರ ಸಂವಾದ

ಜಿಲ್ಲೆಯ 150ಕ್ಕೂ ಹೆಚ್ಚು ರೈತರು ಭಾಗಿ

ದಿನಾಂಕ: 20–06–2018 ರಂದು **ಭಾರತದ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ರವರ ರೈತರೊಂದಿಗೆ ಚರ್ಚಾ ಗೋಷ್ಠಿಯ** ನೇರ ಪ್ರಸಾರದ ಪತ್ರಿಕಾ ಪ್ರಕಟಣೆ.



ಕರ್ನಾಟಕ ಸರ್ಕಾರ

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು ಹಾಗೂ
ಜಿಲ್ಲಾ ಸಂಘಗಳ ನೋಂದಣಾಧಿಕಾರಿಗಳು
ಕಲಬುರಗಿ ಜಿಲ್ಲೆ

ದಿನಾಂಕ: 22/05/2018

ನೋಂದಣಿ ಪ್ರಮಾಣ ಪತ್ರ

ನೋಂದಣಿ ಸಂಖ್ಯೆ :DRKB/SOR/138/2018-2019.

ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 (1960 ನೆಯ ಇಸವಿ 17 ನೇ ಕ್ರಮಾಂಕದ ಕರ್ನಾಟಕ ಅಧಿನಿಯಮ) ಮೇರೆಗೆ ಈ ಕೆಳಕಂಡ ಹೆಸರಿನ

TELLUR RAIT KALYAN ABHIVRUDHI SAMSTHE AT TELLUR , ALAND - 585311, KALABURAGI

ಸಂಘವನ್ನು ನೋಂದಾಯಿಸಲಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ನೋಂದಣಿ ಶುಲ್ಕ ರೂಪಾಯಿ (ಅಂಕಿಗಳಲ್ಲಿ) 500.00/-
(ಅಕ್ಷರಗಳಲ್ಲಿ ಐದು ನೂರು ರೂಪಾಯಿಗಳು ಮಾತ್ರ) ಗಳನ್ನು ಪಾವತಿಸಲಾಗಿದೆ.

22/05/2018 ದಿನಾಂಕದಂದು ನನ್ನ ಸಹಿ ಮತ್ತು ಮುದ್ರೆಯೊಂದಿಗೆ ನೀಡಲ್ಪಟ್ಟಿದೆ.

Class of Society :GENERAL

ಸಹಕಾರ ಸಂಘಗಳ ಉಪನಿಬಂಧಕರು ಹಾಗೂ
ಜಿಲ್ಲಾ ಸಂಘಗಳ ನೋಂದಣಾಧಿಕಾರಿಗಳು
ಕಲಬುರಗಿ

ದಿನಾಂಕ: 22–05–2018 ರಂದು **"ತೆಲ್ಲೂರ ರೈತ ಕಲ್ಯಾಣ ಅಭಿವೃದ್ಧಿ ಸಂಸ್ಥೆ ತೆಲ್ಲೂರ"** ಆಯ್ದ 25 ರೈತರ ನೋಂದಣಿ ಮಾಡಿಸಿದ ಪ್ರಮಾಣ ಪತ್ರ.

# ಯೋಜನೆಯಡಿಯಲ್ಲಿ ಕೈಗೊಂಡ ಚಟುವಟಿಕೆಗಳು

| ಕ್ರ. ಸಂ | ದಿನಾಂಕ | ಚಟುವಟಿಕೆಗಳು |
|---|---|---|
| 1 | 21.01.2017 | ಕೃಷಿ ಬೆಲೆ ಆಯೊಗದ ಮಾನ್ಯ ಅಧ್ಯಕ್ಷರಿಂದ ಗ್ರಾಮ ಬೇಟಿ ಮತ್ತು ಸ್ಥಳೀಯ ಜನಪ್ರತಿನಿದಿಗಳೊಂದಿಗೆ ಯೋಜನೆ ಕುರಿತು ಸಮಾಲೋಚನೆ |
| 2 | 26.02.2017 | ತೆಲ್ಲೂರ ಗ್ರಾಮದಲ್ಲಿ ರೈತರ ಆಯ್ಕೆ ಮತ್ತು ಹಳ್ಳಿಯ ಮುಖ್ಯಸ್ಥರ ಸಭೆಯನ್ನು ಮಾಡಲಾಯಿತು. |
| 3 | 15.04.2017 | ವಿಜ್ಞಾನ ಹಾಗೂ ರೈತರ ಚರ್ಚಾ ಗೋಷ್ಟಿ. |
| 4 | 15.05.2017 | ಮಣ್ಣು ಪರೀಕ್ಷೆ ಮಾದರಿಯ ಸಂಗ್ರಹಣೆ ಬಗ್ಗೆ ರೈತರ ಜೊತೆ ಚರ್ಚೆ ಸಬೆಯನ್ನು ನಡೆಸಲಾಯಿತು. |
| 5 | 04.06.2017 | ಕೆವಿಕೆ, ಕಲಬುರಗಿಯಲ್ಲಿ ಮುಂಗಾರು–ಹಂಗಾಮಿನ ಬೆಳೆಗಳ ತರಬೇತಿಯನ್ನು ಕೈಗೊಳ್ಳಲಾಯಿತು |
| 6 | 05.06.2017 | ಗ್ರಾಮಸಭೆಯನ್ನು ಮಾಡಿ, ಕೃಷಿ ಇಲಾಖೆಯ ಸರ್ಕಾರಿ ಸೌಲಭ್ಯಗಳ ಬಗ್ಗೆ ತಿಳಿಸಲಾಯಿತು. |
| 7 | 06.06.2017 | ಎಲ್ಲೆಗೆರೆ ಸಮೀಕ್ಷೆಯನ್ನು ಐಸೆಕ್ ಸಿಬ್ಬಂದಿಯವರ ಜೊತೆ ಕೈಗೊಳ್ಳಲಾಯಿತು. |
| 8 | 23.06.2017 | ಆಯ್ಕೆಯಾದ 25 ರೈತರು ಕೃಷಿ ವಿಜ್ಞಾನ ಕೇಂದ್ರದ ವಸ್ತು ಸಂಗ್ರಹಾಲಯಕ್ಕೆ ಭೇಟಿ. |
| 9 | 24.06.2017 & 25.06.2017 | ಐಸೆಕ್ ಬೆಂಗಳೂರುನಲ್ಲಿ ಕೆವಿಕೆಯ ಕಾರ್ಯಸಂಯೋಜಕರು, ಉಪ ಕಾರ್ಯ ಸಂಯೊಜಕರು, ಯೋಜನಾ ಸಹಾಯಕರು, ಕ್ಷೇತ್ರ ಸಹಾಯಕರು ಮತ್ತು ಆಯ್ಕೆಯಾದ 25 ರೈತರು ರಾಜ್ಯಮಟ್ಟದ ಕಾರ್ಯಗಾರದಲ್ಲಿ ಭಾಗಿಯಾಗಿದ್ದು. |
| 10 | 04.07.2017 | ಕೆವಿಕೆ, ಕಲಬುರಗಿ, ಕೆಎಮ್‌ಸಿ ಮಣಿಪಾಲ, ಉಡುಪಿ ಸಹಭಾಗಿತ್ವದಲ್ಲಿ ರೈತರ ಆರೋಗ್ಯ ತಪಾಸಣೆ ಶಿಬಿರವನ್ನು ಮಾಡಲಾಯಿತು. |
| 11 | 11.07.2017 | 10 ರೈತರಿಗೆ ಹತ್ತಿ ಬೆಳೆಯ ಪ್ರಾತ್ಯಕ್ಷಿಕೆಯ ತರಬೇತಿಯನ್ನು ಮಾಡಲಾಯಿತು. |
| 12 | 11.07.2017 | 25 ರೈತರಿಗೆ ತೊಗರಿ ಮತ್ತು ನವಣೆ ಬೀಜಗಳನ್ನು ವಿತರಿಸಿ, ಬೆಳೆಗಳ ಪ್ರಾತ್ಯಕ್ಷಿಕೆಯ ತರಬೇತಿಯನ್ನು ಮಾಡಲಾಯಿತು (50 ಎಕರೆ). |
| 13 | 31.07.2017 | ತೋಟಗಾರಿಕೆ ಇಲಾಖೆಯವರಿಂದ ತೋಟಗಾರಿಕೆಯಲ್ಲಿ ರೈತರಿಗೆ ಸಿಗುವ ಸೌಲಭ್ಯಗಳ ಬಗ್ಗೆ ಚರ್ಚೆಯನ್ನು ಕೈಗೊಳ್ಳಲಾಗಿದೆ. |
| 14 | 07.08.2017 | ತರಬೇತಿ ಕಾರ್ಯಕ್ರಮ–ಗೋಬರ್‌ಗ್ಯಾಸ್ ಘಟಕಗಳ ಅರಿವು ಮೂಡಿಸುವ ಬಗ್ಗೆ |
| 15 | 16.08.2017 | ಡಾ. ಪ್ರಭಾಕರ್ ಶೆಟ್ಟಿ ಸರ್ ರವರಿಂದ ಸಮಗ್ರ ಕೃಷಿ ಪದ್ಧತಿಯ ಮಾದರಿಗಳ ಬಗ್ಗೆ ಚರ್ಚೆ ಮತ್ತು ಕ್ಷೇತ್ರ ಭೇಟಿ ಮಾಡಲಾಯಿತು ಹಾಗೂ 25 ರೈತರ ಆಯ್ಕೆ ಮಾಡಲಾಯಿತು. |
| 16 | 16.08.2017 | ತರಬೇತಿ ಕಾರ್ಯಕ್ರಮ–ರೇಷ್ಮೆ ಇಲಾಖೆಯಿಂದ ರೇಷ್ಮೆ ಕೃಷಿ ತರಬೇತಿ ಕುರಿತು. |

| | | |
|---|---|---|
| 17 | 28.08.2017 | ಕೃಷಿ ವಿಜ್ಞಾನ ಕೇಂದ್ರ, ಬೀದರ್‌ಗೆ ಸಮಗ್ರ ಕೃಷಿ ಪದ್ಧತಿಯ ಬಗ್ಗೆ ಅಧ್ಯಯನ ಪ್ರವಾಸ |
| 18 | 15.09.2017 ಣಾ 31.10.2017 | ಐಸೆಕ್ ಮತ್ತು ಪ್ಲಸ್ ಟ್ರಸ್ಟ್ ಬೆಂಗಳೂರು ಅವರು ಕೊಟ್ಟಂತಹ ಮಾದರಿಯಲ್ಲಿ ಎಲ್ಲೆಗೆರೆ ಸಮೀಕ್ಷೆಯನ್ನು ಮಾಡಲಾಯಿತು. |
| 19 | 24.10.2017 | ತೊಗರಿಯಲ್ಲಿ ಇಳುವರಿ ಹೆಚ್ಚಳಕ್ಕಾಗಿ ಪಲ್ಸ್ ಮ್ಯಾಜಿಕ್‌ನ್ನು ತೆಲ್ಲೂರ ಗ್ರಾಮದ ಎಲ್ಲಾ ರೈತರಿಗೆ ವಿತರಿಸಲಾಯಿತು. |
| 20 | 25.10.2017 | ಕೆವಿಕೆ ಕಲಬುರಗಿ, ಪಶುಪಾಲನೆ ಇಲಾಖೆ ಸಹಭಾಗಿತ್ವದಲ್ಲಿ ಉಚಿತ ಪಶು ಆರೋಗ್ಯ ಶಿಬಿರವನ್ನು ಏರ್ಪಡಿಸಲಾಯಿತು. |
| 21 | 25.11.2017 | ಕೃಷಿಮೇಳ, ಕಲಬುರಗಿ ತೆಲ್ಲೂರ ರೈತರು ಭಾಗವಹಿಸಿದ್ದು, |
| 22 | 13.12.2017 | ಗ್ರಾಮಸಭೆಯಲ್ಲಿ ತೋಟಗಾರಿಕೆ ಇಲಾಖೆಯಿಂದ ಸಿಗುವಂತ ಸೌಲಭ್ಯಗಳ ಬಗ್ಗೆ ಚರ್ಚಿಸಿಲಾಯಿತು. |
| 23 | 17.12.2017 | NBSS&LUP ಸಿಬ್ಬಂದಿ ಗ್ರಾಮಕ್ಕೆ ಭೇಟಿ ನೀಡಿ, ಮಣ್ಣಿನ ಆರೋಗ್ಯ ಪರೀಕ್ಷೆಗಾಗಿ ಗ್ರಿಡ್ ಪಾಯಿಂಟ್ ಆಧಾರದ ಮೇಲೆ ಮಣ್ಣನ್ನು ಸಂಗ್ರಹಿಸಲಾಯಿತು. |
| 24 | 24.12.2017 | ಶ್ರೀನಿವಾಸ ಸರಡಗಿ ಪ್ರಗತಿಪರ ರೈತರ ತೊಗರಿ ಹೊಲಕ್ಕೆ ತೆಲ್ಲೂರ ಗ್ರಾಮಸ್ಥರ ಕ್ಷೇತ್ರ ಭೇಟಿ |
| 25 | 29,30 & 31.01.2018 | ರಾಜ್ಯಮಟ್ಟದ ಕಾರ್ಯಗಾರ–ಕೆಎಮ್‌ಸಿ, ಮಣಿಪಾಲ, ಉಡುಪಿ ಗೆ ತೆಲ್ಲೂರ ಗ್ರಾಮಸ್ಥರು ಭಾಗವಹಿಸಿದ್ದು. |
| 26 | 09.02.2018 | ರೈತರೊಂದಿಗೆ ಸರಕಾರದ ಸೌಲಭ್ಯಗಳನ್ನು ಸದುಪಯೋಗಿಸಿಕೊಳ್ಳುವ ಬಗ್ಗೆ ತಿಳುವಳಿಕೆ ಮೂಡಿಸಲಾಯಿತು. |
| 27 | 17.02.2018 | "We Care Society NGO" ಸಿಬ್ಬಂದಿ ತೆಲ್ಲೂರ ಗ್ರಾಮಕ್ಕೆ ಭೇಟಿ ನೀಡಿದ್ದು. |
| 28 | 26.02.2018 | ತರಬೇತಿ ಕಾರ್ಯಕ್ರಮ–ರೈತರು ಆತ್ಮಹತ್ಯೆ ತಡೆಯುವುದಕ್ಕಾಗಿ ಆತ್ಮವಿಶ್ವಾಸ ಹೆಚ್ಚಿಸುವುದು. |
| 29 | 02 & 03.03. 2018 | ರಾಜ್ಯಮಟ್ಟದ ಕಾರ್ಯಗಾರ–ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ, ಕಲಬುರಗಿಯಲ್ಲಿ ತೆಲ್ಲೂರ ಗ್ರಾಮಸ್ಥರು ಭಾಗವಹಿಸಿದ್ದು. |
| 30 | 15.03.2018 | ಸಮಾಜ ವಿಜ್ಞಾನ ವಿಭಾಗ, ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ, ಕಲಬುರಗಿ ಸಿಬ್ಬಂದಿ, ವಿದ್ಯಾರ್ಥಿಗಳು ತೆಲ್ಲೂರ ರೈತರೊಂದಿಗೆ ಸಾಮಾಜಿಕ, ಆರ್ಥಿಕ ಭದ್ರತೆಯ ಬಗ್ಗೆ ಸಮಾಲೋಚನೆ |
| 31 | 24.03.2018 | ರೇಷ್ಮೆ ಕೃಷಿ ತರಬೇತಿ |
| 32 | 22.05.2018 | "ತೆಲ್ಲೂರ ರೈತ ಕಲ್ಯಾಣ ಅಭಿವೃದ್ಧಿ ಸಂಸ್ಥೆ ತೆಲ್ಲೂರ" ಆಯ್ದ 25 ರೈತರ ನೋಂದಣಿ ಮಾಡಿಸಿದ ಪ್ರಮಾಣ ಪತ್ರ. |
| 33 | 05.06.2018 | **ವಿಶ್ವ ಪರಿಸರ ದಿನಾಚರಣೆಯ** ಅಂಗವಾಗಿ ಮುಂಗಾರು–ಹಂಗಾಮಿನ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. |
| 34 | 08 & 09.06.2018 | **ಕೃಷಿ ವಿಜ್ಞಾನ ಕೇಂದ್ರ ಹಿರಿಯೂರು, ಚಿತ್ರದುರ್ಗ ಜಿಲ್ಲೆಯಲ್ಲಿ ರೈತರ ಆದಾಯ ಮತ್ತು ಕಲ್ಯಾಣ ಅಭಿವೃದ್ಧಿ ಯೋಜನೆಯ ಕಾರ್ಯಾಗಾರ**ವನ್ನು ಏರ್ಪಡಿಸಲಾಗಿತ್ತು. |
| 35 | 13.06.2018 | ಉಚಿತ ಪಶು ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. |

| | | |
|---|---|---|
| 36 | 20.06.2018 | ಭಾರತದ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ರವರ ರೈತರೊಂದಿಗೆ ಚರ್ಚಾ ಗೋಷ್ಠಿಯ ನೇರ ಪ್ರಸಾರದ ಕಾರ್ಯಕ್ರಮ |
| 37 | 17.07.2018 | ಕೆವಿಕೆ ಕಲಬುರಗಿಯಲ್ಲಿ ತೆಲ್ಲೂರ ರೈತರು ಪ್ರಸ್ತುತ ಸನ್ನಿವೇಶದಲ್ಲಿ ಕೃಷಿಯಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ನಿವಾರಣೆ ಬಗ್ಗೆ ಚರ್ಚೆಯನ್ನು ಏರ್ಪಡಿಸಲಾಗಿತ್ತು. ಕರ್ನಾಟಕ ಸರ್ಕಾರದ ಕೃಷಿ ಸಚಿವರಾದ ಸನ್ಮಾನ್ಯ ಶ್ರೀ ಶಿವಶಂಕರ್ ರೆಡ್ಡಿ, ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ. ಪ್ರಿಯಾಂಕ ಖರ್ಗೆ, ಕೃವಿವಿ, ರಾಯಚೂರಿನ ಕುಲಪತಿಗಳಾದ ಶ್ರೀ. ಗುತ್ತಿ ಜಂಬುನಾಥ ಹಾಗೂ ಕೆವಿಕೆಯ ಮುಖ್ಯಸ್ಥರಾದ ಡಾ. ರಾಜು ಜಿ. ತೆಗ್ಗೆಳ್ಳಿ ರವರು ಭಾಗವಹಿಸಿ, |
| 38 | 26 & 27.07.2018 | **ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರಿ**ನಲ್ಲಿ ನಡೆದ ರಾಜ್ಯ ಮಟ್ಟದ ಕಾರ್ಯಾಗಾರದಲ್ಲಿ ತೆಲ್ಲೂರಿನ ರೈತರು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡರು. |
| 39 | 07.08.2018 | ತೆಲ್ಲೂರ ಗ್ರಾಮಸ್ಥರಿಗೆ ದಣ್ಣೂರ ಗ್ರಾಮ ಪಂಚಾಯತ, ಪಂಚಾಯತ ಅಭಿವೃದ್ಧಿ ಅಧಿಕಾರಿರವರಿಂದ MGNAREGA ಯೋಜನೆಯ ಬಗ್ಗೆ ಮಾಹಿತಿ ನೀಡಲಾಯಿತು. |
| 40 | 03.09.2018 | ಪಾರ್ಥೇನಿಯಂ ನಿರ್ಮೂಲನಾ ದಿನಾಚರಣೆಯನ್ನು ಪ್ರಾಥಮಿಕ ಶಾಲೆ ತೆಲ್ಲೂರಿನಲ್ಲಿ ಆಚರಿಸಲಾಯಿತು. |
| 41 | 15.09.2018 | **ಪಶು ಆಸ್ಪತ್ರೆ ಕಡಗಂಚಿಯ**ಲ್ಲಿ ಹಿರಿಯ ಪಶು ವೈದ್ಯಾಧಿಕಾರಿ ಡಾ. ಶಂಕರ್ ಕಣ್ಣಿ ಯವರಿಗೆ ತೆಲ್ಲೂರಿನ ಆಯ್ದ 25 ರೈತರ ಅರ್ಜಿಗಳನ್ನು **ಪಶುಭಾಗ್ಯ ಯೋಜನೆ** ಅಡಿಯಲ್ಲಿ ಸೇರಿಸಬೇಕೆಂದು ಕೆಎಪಿಸಿ ಸಿಬ್ಬಂದಿಯವರು ಹಾಗೂ ತೆಲ್ಲೂರಿನ ಗ್ರಾಮಸ್ಥರು ಮನವಿ ಮಾಡಿದರು. |
| 42 | 18.09.2018 | ತೆಲ್ಲೂರ ರೈತರ ಸಹಯೋಗದೊಂದಿಗೆ ಕೆವಿಕೆಯ ಮುಖ್ಯಸ್ಥರು ಡಾ. ರಾಜು ಜಿ. ತೆಗ್ಗೆಳ್ಳಿ ರವರು **ಕಲಬುರಗಿ ಜಿಲ್ಲಾಧಿಕಾರಿ ಶ್ರೀ ವೆಂಕಟೇಶ್ ಕುಮಾರ್** ಅವರನ್ನು ಭೇಟಿ ಮಾಡಿದರು. |
| 43 | 24.09.2018 | ತೆಲ್ಲೂರ ಗ್ರಾಮದಲ್ಲಿ ಕೆಎಪಿಸಿ ಸಿಬ್ಬಂದಿಯವರು ರೈತರ ಸಹಯೋಗದೊಂದಿಗೆ **"ಸ್ವಚ್ಛತಾ– ಹೀ– ಸೇವಾ"** ಕಾರ್ಯಕ್ರಮವನ್ನು ಆಯೋಜಿಸಿದರು. |
| 44 | 05.10.2018 | ಸುಮಾರು 45 ತೆಲ್ಲೂರ ರೈತರಿಗೆ ಕಡಲೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು. |
| 45 | 31.12.2018 | ಕೃಷಿಯಲ್ಲಿ ಎರೆಗೊಬ್ಬರದ ಮಹತ್ವ ಬಗ್ಗೆ ತರಬೇತಿ ನೀಡಲಾಯಿತು. |
| 46 | 05.01.2019 | **ಪ್ಲಸ್ ಟ್ರಸ್ಟ್ ಅಧ್ಯಕ್ಷರಾದ ಡಾ. ಪ್ರಭಾಕರ್ ಶೆಟ್ಟಿ** ರವರ ಅಧ್ಯಕ್ಷತೆಯಲ್ಲಿ ಕೃಷಿ ಇಲಾಖೆ ಹಾಗೂ ಕೃಷಿಗೆ ಸಂಬಂಧಪಟ್ಟ ಸಹಾಯಕ ನಿರ್ದೇಶಕರೊಂದಿಗೆ ಇಲಾಖೆಯ ಯಾವುದೇ ಸರ್ಕಾರಿ ಯೋಜನೆಗಳನ್ನು ತೆಲ್ಲೂರಿಗೆ ರೈತರಿಗೆ ಮೊದಲ ಆದ್ಯತೆ ನೀಡಬೇಕೆಂದು ತಿಳಿಸಿದರು. |
| 47 | 23.01.2019 | ಕೆವಿಕೆಯ ಮುಖ್ಯಸ್ಥರಾದ ಡಾ. ರಾಜು ಜಿ. ತೆಗ್ಗೆಳ್ಳಿ ಯವರು **ತೊಗರಿ ಹಾಗೂ ಕಡಲೆ ಬೀಜಗಳ ಮೌಲ್ಯವರ್ಧನೆ ಹಾಗೂ ಮಾರುಕಟ್ಟೆಯ** ಬಗ್ಗೆ ತಿಳಿಸಿದರು. |
| 48 | 18.06.2019 | ತೊಗರಿ ಬೆಳೆಯ ಬಗ್ಗೆ ಮುಂಗಾರು–ಹಂಗಾಮಿನ ತರಬೇತಿ |
| 49 | 03.07.2019 | ಹತ್ತಿ ಬೆಳೆಯ ಬಗ್ಗೆ ಮುಂಗಾರು–ಹಂಗಾಮಿನ ತರಬೇತಿ |

**ICAR - KRISHI VIGYAN KENDRA, KALABURAGI**
**EXPENDITURE STATEMENT OF THE PROJECT ENTITLED**

## "Enhancing farmers income and development in selected village"

----------------------------------------------------------------------------------------------------

## Details of the budget relesed and expenditure:

| 2016-17 | | | | 2017-18 | | | 2018-19 | | |
|---|---|---|---|---|---|---|---|---|---|
| Total budget allocated | Grant released from KAPC Kalburgi | Utilized | Balance | Grant released from KAPC Kalburgi | Utilized | Balance | Grant released from KAPC Kalburgi | Utilized | Balance |
| 25,00,000 | 15,00,000 | - | 15,00,000 | 21,00,000 | 15,25,000 | 05,75,000 | 10,02,717 | 6,05,726 | 3,96,991 |